



ಐಕ್ಯರಂಗ

ಸಂಪುಟ 12 ಸಂಚಿಕೆ 41 ಅಕ್ಟೋಬರ್ 14,1990 ಬೆಲೆ ರೂ.1.50

ರಾಷ್ಟ್ರಪತಿ ಆಡಳಿತದ ಹೇರಿಕೆ ದುರದೃಷ್ಟಕರ

ಅಂತರಿಕ ಶತ್ರುಗಳನ್ನು ಎದುರಿಸುವುದಕ್ಕೆ ಉದ್ರಿಕ್ತ ಪರಿಸ್ಥಿತಿಯ ಬಳಕೆ

ಕೋಲಾರದ ಕೋಮು ಗಲಭೆಗಳು

ವೀರೇಂದ್ರ ಪಾಟೀಲರ ಕಾಂಗ್ರೆಸ್ ಸರಕಾರದ ಪತನ?

ಸಿಪಿಐ(ಎಂ)

ಬೀಜಿಂಗ್ ಏಷ್ಯಾಡ್ 1990

ಅದೊಂದು ಕಣ್ಣಿಗೆ ಕಟ್ಟುವ ಮನೋಹರ ಪ್ರದರ್ಶನ. ಬೀಜಿಂಗ್‌ನ ಕಾರ್ಮಿಕರ ಸ್ಟೇಡಿಯಂನಲ್ಲಿ ನಡೆದ ವರ್ಣರಂಜಿತ ಸಮಾರೋಪ ಸಮಾರಂಭದೊಂದಿಗೆ ಹನ್ನೊಂದನೇ ಏಷ್ಯನ್ ಗೇಮ್ಸ್ ಹದಿನೈದು ದಿನಗಳ ಆಶ್ಚರ್ಯಕರ ಸ್ಪರ್ಧೆಗಳು ಯಶಸ್ವಿಯಾಗಿ ಮುಕ್ತಾಯ ಕಂಡಿದ್ದವು.

35 ರಾಷ್ಟ್ರಗಳ ಐದು ಸಾವಿರ ಸ್ಪರ್ಧಿಗಳು 27 ಆಟೋಟಗಳಲ್ಲಿ ವೇಗ, ಕೌಶಲ, ಶಕ್ತಿಗಳಲ್ಲಿ ಮಾನವ ಪ್ರತಿಭೆಯ ಉಚ್ಚಮಟ್ಟವನ್ನು ಪ್ರದರ್ಶಿಸಿದರು. ಏಷ್ಯದ ಆಟಗಾರರಿಗೆ ಅಸಾಧ್ಯವೆಂದು ಪರಿಗಣಿತವಾದ ಬೀಜಿಂಗ್ ಏಷ್ಯಾಡ್‌ನಲ್ಲಿ ಸಾಧಿಸಲಾಯಿತು. 15 ದಿನಗಳ ತೀಕ್ಷ್ಣ ಸ್ಪರ್ಧೆಯಲ್ಲಿ ಏಷ್ಯಾಡ್ ರಿಕಾರ್ಡುಗಳು ಇಸ್ಪೀಟ್ ಆಟದ ಎಲೆಗಳಂತೆ ಉದುರಿಬಿದ್ದವು. ಸ್ಕೇಟಿಂಗ್, ಡೈವಿಂಗ್, ಮತ್ತು ಲಿಫ್ಟಿಂಗ್‌ನಲ್ಲಿ ವಿಶ್ವ ರೆಕಾರ್ಡುಗಳನ್ನು ಸ್ಥಾಪಿಸಲಾಯಿತು.

ಒಂದು ದೇಶದ ಹೆಮ್ಮೆ

ಏಷ್ಯಾಡ್‌ನ ಅತಿಥೇಯ ರಾಷ್ಟ್ರ ಚೀನಾ ಇಂದು ಹೆಮ್ಮೆಯಿಂದ ತಲೆಯೆತ್ತಿ ನಿಂತ ದೇಶ. ಅಂತರರಾಷ್ಟ್ರೀಯ ಕ್ರೀಡೆಗಳಿಂದ ಬಹಿಷ್ಕೃತವಾಗಿ ಸಮಾಜವಾದದ ಅಂತರಿಕ ಸಾಮರ್ಥ್ಯವನ್ನು ಪೂರ್ಣವಾಗಿ ಉಪಯೋಗಿಸುತ್ತಾ ಕ್ರೀಡೆಗಳನ್ನು ಬೆಳೆಸುತ್ತಿದ್ದ ಚೀನಾ 1974 ರಲ್ಲಿ ಪ್ರಥಮ ಬಾರಿಗೆ ಕ್ರೀಡಾ ಜಗತ್ತಿನಲ್ಲಿ ಉಲ್ಕೆಯಂತೆ ಬಂದೆರಗಿದಂದಿನಿಂದ ಅದರ ಆಟಗಾರರು ಗಣನೀಯವಾಗಿ ಸಾಧನೆಗಳನ್ನು ಮಾಡಿದ್ದಾರೆ. 1986ರಲ್ಲಿ ಅವರು ಸಿಯೋಲ್ ಏಷ್ಯಾಡ್‌ನಲ್ಲಿ ಚಾಂಪಿಯನ್ ದೇಶವಾಗಿ ಹೊರಹೊಮ್ಮಿದರು. ಆದರೆ ಅಲ್ಲಿ ದಕ್ಷಿಣ ಕೋರಿಯಾ ಅವರ ಬೆನ್ನ ಹಿಂದೆಯೇ ಇತ್ತು. ಕೇವಲ ಒಂದು ಚಿನ್ನದ ಪದಕ ಮಾತ್ರ ಅವರಿಬ್ಬರ ನಡುವೆ ಇತ್ತು. ನಂತರ ನಡೆದ ಸಿಯೋಲ್ ಒಲಂಪಿಕ್ಸ್‌ನಲ್ಲಿ ಚೀನಾ ಏಷ್ಯನ್ ರಾಷ್ಟ್ರಗಳಲ್ಲಿಯೇ ಅತ್ಯಂತ ಹೆಚ್ಚಿನ ಪದಕ ಗಳಿಸಿತ್ತು. ಇವೆಲ್ಲವುಗಳಿಂದ ಚೀನಾ ತನ್ನ ಚಾಂಪಿಯನ್ ಸ್ಥಾನವನ್ನು ಉಳಿಸಿಕೊಳ್ಳುವುದೆಂದು ನಿರೀಕ್ಷಿಸಲಾಗಿತ್ತು. ಆದರೆ ಚೀನಾ ಅದನ್ನು ಸಾಧಿಸಿದ ರೀತಿ ಎಲ್ಲರಿಗೂ ದಂಗು ಪಡಿಸುವಂತಾದ್ದು. ಏಷ್ಯನ್ ಕ್ರೀಡೆಗಳ ಇತಿಹಾಸದಲ್ಲಿಯೇ ಒಂದು ರಾಷ್ಟ್ರ ಎಂದೂ ಇಷ್ಟೊಂದು ಮೇಲುಗೈ ಸಾಧಿಸಿರಲಿಲ್ಲ. ಒಟ್ಟು 308 ಚಿನ್ನದ ಪದಕಗಳಲ್ಲಿ 183 ಚಿನ್ನದ ಪದಕಗಳನ್ನು ಗೆದ್ದು ಅಮೋಘ ಸಾಧನೆ ಮಾಡಿದ್ದಾರೆ. ನಿಜವಾಗಿಯೂ ಇದೊಂದು ಕಣ್ಣು ಕೋರೈಸುವ ಸ್ವಪ್ನಸದೃಶ ಸಾಧನೆ.

ಒಟ್ಟು 27ಕ್ರೀಡೆಗಳಲ್ಲಿ ಚೀನಾ ಬಹಳಷ್ಟರಲ್ಲಿ ಮಿಂಚಿದೆ. ವೈಟ್ ಲಿಫ್ಟಿಂಗ್, ಬ್ಯಾಂಡ್‌ಮಿಂಟನ್, ಜಿಮ್ನಾಸ್ಟಿಕ್ಸ್, ಟೇಬಲ್ ಟೆನ್ನಿಸ್, ಡೈವಿಂಗ್ ಮತ್ತು ಅಥ್ಲೆಟಿಕ್ಸ್‌ನಲ್ಲಿ ಮುಕ್ಕಾಲು ಪಾಲು ಪದಕಗಳನ್ನು ಗೆದ್ದಿದ್ದಾರೆ. ಸ್ಕೇಟಿಂಗ್‌ನಲ್ಲಿ, ವೈಟ್ ಲಿಫ್ಟಿಂಗ್‌ನಲ್ಲಿ ಕೆಲವು ವಿಶ್ವ ರಿಕಾರ್ಡ್‌ಗಳನ್ನು ಮುರಿಯಲಾಗಿದೆ. ದ.ಕೊರಿಯನ್ನರು ಬಾಕ್ಸಿಂಗ್, ಕುಸ್ತಿ ಹಾಗೂ ಬಿಲ್ಲುಗಾರಿಕೆಯಲ್ಲಿ ಪರಿಣತಿಯನ್ನು ಪ್ರದರ್ಶಿಸಿ ಎರಡನೆಯವರಾಗಿ ಮೆರೆದರು. ಈ ಏಷ್ಯಾಡ್‌ನ ಅತಿ ಮುಖ್ಯ ಬೆಳವಣಿಗೆಯೆಂದರೆ ಕತಾರ್‌ನಂತಹ ಸಣ್ಣ ದೇಶಗಳೂ ಓಟ ವಿಭಾಗದಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾದ ರಾಷ್ಟ್ರಗಳಾಗಿ ಹೊರಹೊಮ್ಮಿದವು.

ಭಾರತದ ಸಾಧನೆ

ಭಾರತಕ್ಕೆ ಬೀಜಿಂಗ್ ಏಷ್ಯಾಡ್ ಅತ್ಯಂತ ನಿರಾಶಾದಾಯಕ ಪಂದ್ಯಗಳಾದವು. 3 00 ಜನ ಆಟಗಾರರ ಬೃಹತ್ ತಂಡ ಒಂದೇ ಒಂದು ಚಿನ್ನದ ಪದಕದೊಂದಿಗೆ ಮರಳಿತು. 23 ಪದಕಗಳನ್ನು ಪಡೆದು 11ನೇ ಸ್ಥಾನಕ್ಕಿಳಿದು ಭಾರತದ್ದು ಇಲ್ಲಿಯವರೆಗ ಏಷ್ಯಾಡ್‌ಗಳಲ್ಲೆಲ್ಲಾ ಅತ್ಯಂತ ಕನಿಷ್ಠ ಸಾಧನೆ. ನಮ್ಮ ದೇಶದ ಆಶಾಕಿರಣ ಓಟಗಳು ಮತ್ತು ಹಾಕಿ. ಸಿಯೋಲ್ ಏಷ್ಯಾಡ್‌ನಲ್ಲಿ 11 ಚಿನ್ನದ ಪದಕಗಳಿಸಿದ ಸಾಧನೆಯನ್ನು ಪಿ.ಟಿ. ಉಷಾ ಮತ್ತೆ ಸಾಧಿಸಬಹುದೆಂದು ಯಾರೂ ನಿರೀಕ್ಷಿಸದಿದ್ದರೂ ಎರಡು ಸ್ಪರ್ಧೆಗಳಲ್ಲಿ ಚಿನ್ನ ತರಬಹುದೆಂಬ ಆಸೆ ಇತ್ತು. ಆದರೆ ಹಾಗಾಗಲಿಲ್ಲ. ಎರಡರಲ್ಲಿಯು ಬೆಳ್ಳಿಯ ಪದಕಕ್ಕೆ ತೃಪ್ತರಾಗಬೇಕಾಯಿತು. 3000 ಮೀಟರುಗಳ ಸ್ಟೀಪಲ್ ಚೇಸ್ ಆಟದಲ್ಲಿ ದೀನಾರಾಮ್‌ರವರ , 800 ಮೀ ಓಟದಲ್ಲಿ ಗಿದ್ದ ಹುಡುಗಿ ರೋಸಾಕುಟ್ಟಿಯವರ ಸಾಧನೆ ಮಾತ್ರ ಸ್ವಲ್ಪ ಹೆಮ್ಮೆ ಪಡಬಹುದಾದ ಪ್ರದರ್ಶನಗಳು.- ನಮ್ಮ ಹಾಕಿ ತಂಡ ಗೆಲ್ಲುವುದಕ್ಕೆ ಬೇಕಾದ ಆ ಸ್ವಲ್ಪ'ಮೇಲ್ಮೆ' ಯಿಲ್ಲದೆ ತಮಗಿಂತ ಉತ್ತಮ ತಂಡವಾದ ಪಾಕಿಸ್ತಾನದಿಂದ ಸೋಲನ್ನಪ್ಪಿತು.

ಒಟ್ಟಿನಲ್ಲಿ ಇಡೀ ಏಷ್ಯಾಡ್ ಅತ್ಯಪೂರ್ವ ಯಶಸ್ಸು ಕಂಡಿತು. ಚೀನಿಯರು ತಮ್ಮ ಕ್ರೀಡಾ ಕೌಶಲದಲ್ಲಿ ಮಾತ್ರವೇ ಆ ಸಂಘಟನಾ ಸಾಮರ್ಥ್ಯದಲ್ಲಿಯೂ ತಮ್ಮ ಮೇಲುಗೈಯನ್ನು ಮೆರೆದರು. ಅನೇಕರು ಏಷ್ಯಾಡ್ ಯಶಸ್ವಿಯಾಗಬಹುದೇ ಎಂಬ ಸಂಶಯ ವ್ಯಕ್ತ ಪಡಿಸಿದ್ದರು. ಪಾಶ್ಚಿಮಾತ್ಯ ಸುದ್ದಿ ಮಾಧ್ಯಮಗಳಲ್ಲಿ ಕೆಲವು, ದೊಂಬಿಕಾರ ವಿದ್ಯಾರ್ಥಿಗಳಿಂದ ಕ್ರೀಡೆಗಳಲ್ಲಿ ಗೊಂದಲವುಂಟಾಗಿಯೇ ತೀರುತ್ತದೆ ಎಂದು ಪ್ರತಿಪಾದಿಸಿದ್ದರು. ಆಟಗಳ ಸಮಯದಲ್ಲಿಯೂ ನೂರೆಂಟು ಸಂಶಯಗಳನ್ನು ಬಿತ್ತಿದರು. ಅಪಪ್ರಚಾರ ನಡೆಸಿದರು. ಆದರೆ ಇಡೀ ಚೀನಾ ಏಕೀಭವಿಸಿ ಒಂದೇ ವ್ಯಕ್ತಿಯಂತೆ ಮೇಲೆದ್ದು ಏಷ್ಯಾಡ್ ಅನ್ನು ಚಿರಸ್ಮರಣೀಯವಾಗಿಸಿತು.

ದಾಂಡೇಲಿಯ ಸಿಐಟಿಯು ಕಾರ್ಮಿಕರ ಪ್ರತಿಭಟನೆ

ದಾಂಡೇಲಿಯ ಸಿಐಟಿಯುಗೆ ಸೇರಿದ ಕಾರ್ಮಿಕರು ಸೆಪ್ಟೆಂಬರ್ 24ರಂದು ವಿದ್ಯುತ್, ಹಾಲು ಹಾಗೂ ಬಸ್ ದರ ಏರಿಕೆಯನ್ನು ಪ್ರತಿಭಟಿಸಿ ದಾಂಡೇಲಿಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯಲ್ಲಿ ತೆರಳಿ ತಹಶೀಲ್ದಾರರಿಗೆ ಹಾಗೂ ವಿದ್ಯುತ್ ಇಲಾಖೆಯ ಮುಖ್ಯಸ್ಥರಿಗೆ ಮನವಿ ಪತ್ರವನ್ನು ಅರ್ಪಿಸಿದರು. ಮೆರವಣಿಗೆಯ ನೇತೃತ್ವವನ್ನು ಸಿಐಟಿಯು ರಾಜ್ಯ ಸಮಿತಿಯ ಸದಸ್ಯರುಗಳಾದ ಕಾಂ. ಟಿ.ಎಸ್. ನಾಯ್ಕ ಹಾಗೂ ಕಾಂ. ಹರೀಶ್ ನಾಯ್ಕರು ವಹಿಸಿದ್ದರು.

ಕೊಕ್ಕೊ ಕಾರ್ಮಿಕರ ಹೋರಾಟಕ್ಕೆ ಬೆಂಬಲ

ಬಳಿನೆಲೆ ಆಸುಪಾಸಿನ ಕಾರ್ಮಿಕ ಸಭೆಯೊಂದು ಸೆಪ್ಟೆಂಬರ್ 9 ರಂದು ಬಳಿನೆಲೆಯಲ್ಲಿ ಕಾಂ. ಸೂರ್ಯನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ನಡೆದು ಕ್ಯಾಂಪ್ಕೊ ಸಂಸ್ಥೆಯ ಸಂಸ್ಥೆಯು ನಡೆಸುವ ತೋಟದ ಕಾರ್ಮಿಕರಿಗೆ ಕಾನೂನುಬಾಹಿರವಾಗಿ ಸೆಪ್ಟೆಂಬರ್ 10ರಿಂದ .ಕೆಲಸ ನಿಲ್ಲಿಸಿದೆ ಹಾಗೂ ಕ್ಯಾಂಪ್ಕೋ ಸಂಸ್ಥೆಯು ತಾನು ಮಾಡಿದ್ದೇ ಕಾನೂನು ಮತ್ತು ಯಾವ ಸವಲತ್ತನ್ನು ಕೊಡದೇ ದುಡಿಸಿದ್ದು ಈಗ ಕಾರ್ಮಿಕರು ಕಾನೂನು ಜಾರಿಗಾಗಿ ಒತ್ತಾಯಿಸಿದಾಗ ಕ್ಯಾಂಪ್ಕೊ ಸಂಸ್ಥೆಯು ಕೆಲಸ ನಿಲ್ಲಿಸಿದ್ದನ್ನು ತೀವ್ರವಾಗಿ ಖಂಡಿಸಿದರು.

ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ಕಾಂ. ಮೂಸಬ್ಬರು ಅಕ್ಟೋಬರ್ 24ರಂದು ಕೊಕ್ಕೊ ತೋಟದ ಕಾರ್ಮಿಕರು ಮಂಗಳೂರಿನ ಕ್ಯಾಂಪ್ಕೊ ಆಫೀಸಿನ ಮುಂದೆ ನಡೆಸುವ ಹೋರಾಟಕ್ಕೆ ಬೆಂಬಲ ಕೋರಿದರು.

ಜ್ಞಾನ ವಿಜ್ಞಾನ ಸಮಿತಿ ರಚನೆ

ಸಿರುಗುಪ್ಪದಲ್ಲಿ ದಿನಾಂಕ 23-9-90ರಂದು ಜ್ಞಾನ ವಿಜ್ಞಾನ ಜಾಥಾದ ಸಿರುಗುಪ್ಪ ತಾಲೂಕು ಸಮಾವೇಶವನ್ನು ನಡೆಸಲಾಯಿತು. ಜಿಲ್ಲಾ ಉಪಾಧ್ಯಕ್ಷರಾದ ಜಿ.ಎಂಕಟಪ್ಪ ಜಾಥಾದ ರೂಪರೇಷೆಗಳನ್ನು ವಿವರಿಸಿದರು. ಈ ಸಮಾವೇಶದಲ್ಲಿ ತಾಲೂಕು ಸಮಿತಿಯನ್ನು' ರಚಿಸಲಾಯಿತು.

ಗೌರವಾಧ್ಯಕ್ಷರಾಗಿ ಎಂ. ಶಂಕರ ರೆಡ್ಡಿ(ಶಾಸಕರು), ಕಾರ್ಯಾಧ್ಯಕ್ಷರಾಗಿ ಪುರುಷೋತ್ತಮ್(ತಹಶೀಲ್ದಾರ್)

, ಉಪಾಧ್ಯಕ್ಷರಾಗಿ ಸಿದ್ದವೀರಯ್ಯ(ಎಇಓ), ಕಾರ್ಯದರ್ಶಿಯಾಗಿ ಜಿ.ವೆಂಕಟಪ್ಪ(ಉಪನ್ಯಾಸಕರು), ಸಹಕಾರ್ಯದರ್ಶಿಗಳಾಗಿ ಅಬ್ದುಲ್ ನಬಿಹಾಗೂ ಬಿ.ಎ.ಮಲ್ಲಿಕಾರ್ಜುನಯ್ಯ ಮತ್ತು ಖಜಾಂಚಿಯಾಗಿ ಹೆಚ್ . ಚೆನ್ನಬಸಪ್ಪ ರವರುಗಳನ್ನು ಆರಿಸಲಾಯಿತು.

ತಾಲೂಕಿನ ಎಲ್ಲಾ ಮಂಡಲ ಪ್ರಧಾನರು, ಉಪಪ್ರಧಾನರು, ಜಿಲ್ಲಾ ಪರಿಷತ್ ಸದಸ್ಯರನ್ನೊಳಗೊಂಡ 25 ಜನರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಸಿರಿಗೇರಿ

ಸೆಪ್ಟೆಂಬರ್ 22 ರಂದು ಸಿರುಗುಪ್ಪ ತಾಲೂಕಿನ ಸಿರಿಗೇರಿಯಲ್ಲಿ ನಡೆದ ಜ್ಞಾನವಿಜ್ಞಾನ ಜಾಥಾ ದ ಸಬೆಯನಡೆಯಿತು. ಈ ಸಭೆಯಲ್ಲಿ ಜಾಥಾದ ಯಶಸ್ವಿಗಾಗಿ ಒಂದು ಸಮಿತಿಯನ್ನು ರಚಿಸಲಾಯಿತು.ಗೌರವಾಧ್ಯಕ್ಷರಾಗಿ ಶ್ರೀ ಬತಾದಿ ಈರಣ್ಣ (ಪ್ರದಾನರು), ಕಾರ್ಯಾಧ್ಯಕ್ಷರಾಗಿ ಕೆ. ಭೀಮಲಿಂಗಪ್ಪ, ಉಪಾಧ್ಯಕ್ಷರಾಗಿ ಬಿ. ಸೋಮಶೇಖರ್, ನಾಗರಾಜ, ತಿಪ್ಪೇಸ್ವಾಮಿ, ಕಾರ್ಯದರ್ಶಿಯಾಗಿ ಎಸ್. ಗುರುರಾಜರಾವ್, ಸಂಘಟನಾ ಕಾರ್ಯದರ್ಶಿಯಾಗಿ ಕೆ.ಬಸವರಾಜ್, ಮರಿಗೌಡ, ಹೆಚ್. ನೀರಪ್ಪ, ಖಜಾಂಚಿಯಾಗಿ ಕೆ.ಸುಂಕಯ್ಯ ಹಾಗೂ 18 ಜನ ಸದಸ್ಯರುಳ್ಳ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ರಸ್ತೆ ದುರಸ್ತಿಗಾಗಿ ಆಟೋ ಚಾಲಕರ ಪ್ರತಿಭಟನೆ

ಬೆಂಗಳೂರು ನಗರದಲ್ಲಿ ಹಳ್ಳ ಕೊಳ್ಳಗಳಿಂದ ತುಂಬಿದ ರಸ್ತೆಗಳನ್ನು ದುರಸ್ತಿ ಮಾಡಿಸಬೇಕೆಂದು ಒತ್ತಾಯಿಸಿ ದಿನಾಂಕ 4-10-90 ರಂದು ಬೆಂಗಳೂರು ಮಹಾನಗರ ಪಾಲಿಕೆಯ ಮುಂದೆ ಮುನ್ನೂರಕ್ಕೂ ಹೆಚ್ಚು ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ (ಸಿಐಟಿಯು) ಸದಸ್ಯರು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ಪಿಕೆಟಿಂಗ್ ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷರು ನೆರೆದಿದ್ದ ಚಾಲಕರಿಗೆ ವಿವರಿಸುತ್ತಿದ್ದಾಗ ಪೋಲೀಸರು ಬೆತ್ತದ ಪ್ರಹಾರ ನಡೆಸಿದರು. ಇದನ್ನು ಸಂಘವು ತೀವ್ರವಾಗಿ ಪ್ರತಿಭಟಿಸಿದೆ. ಬೆಂಗಳೂರು ನಗರವು ಅನೇಕ ರಸ್ತೆಗಳು ಹೊಂಡ ಗುಂಡಿಗಳಿಂದ ಅಲಂಕೃತಗೊಂಡಿವೆ. ವಾಹನ ಸವಾರರು ಈ ಹೊಂಡಗಳನ್ನು ದಾಟ ಮುಂದೆ ಹೋಗಬೇಕಾದರೆ ಸರ್ಕಸ್ ಮಾಡಬೇಕಾಗುತ್ತದೆ. ಗುಂಡಿಗಳನ್ನು ಜಿಗಿದು ಹೋಗುವಾಗ ವಾಹನದ ಹಾಗೂ ಸವಾರರ ಸೊಂಟ ಮುರಿಯುವ ಸಂಭವವಿರುತ್ತದೆ. ಪರಿಸ್ಥಿತಿ ಹೀಗಿರುವಾಗ ರಸ್ತೆ ದುರಸ್ಥಿ ಮಾಡಿಸಿ ಎಂದು ಎ.ರ್. ಡಿ.ಯು. ಹಮ್ಮಿಕೊಂಡ ಪಿಕೆಟಿಂಗ್ ಕಾರ್ಯಕ್ರಮ ಸಾರ್ವಜನಿಕ ಮುಖ್ಯವಾಗಿ ವಾಹನ ಸವಾರರ ಮೆಚ್ಚಿಗೆಗೆ ಪಾತ್ರವಾಗಿದೆ. ಸಂಘವು ಮಹಾನಗರ ಪಾಲಿಕೆಯ ಮುಖ್ಯಸ್ಥರಿಗೆ 15 ದಿವಸದ ಗಡುವು ನೀಡಿ ಅದರೊಳಗೆ ರಸ್ತೆಗಳನ್ನು ದುರಸ್ಥಿ ಮಾಡಿಸದಿದ್ದರೆ ರಸ್ತೆತಡೆ ಚಳುವಳಿ ನಡೆಸುವುದಾಗಿ ಎಚ್ಚರಿಕೆ ನೀಡಿದೆ.

ಬಂಧನಕ್ಕೊಳಗಾದವರಲ್ಲಿ ಸಂಘದ ಪದಾಧಿಕಾರಿಗಳೊಂದಿಗೆ ಸಿಐಟಿಯು ಜಿಲ್ಲಾ ಸಮಿತಿಯ ಉಪಾಧ್ಯಕ್ಷ ಕಾಂ. ಆರ್. ಶ್ರೀನಿವಾಸ್ ಮತ್ತು ಕಾಂ. ಕೆ.ಪಿ. ಸುಬ್ರಮಣಿಯ ಸೇರಿದ್ದಾರೆ.

ಕೋಮು ಗಲಭೆಗಳಿಗೆ ನೀರೆರೆದ ಬ್ರಿಟಿಷರು

ಕೋಮು ಗಲಬೆಗಳು ಇಷ್ಟೊಂದು ವ್ಯಾಪಕವಾಗಿ ನಡೆಯುತ್ತಿರುವುದನ್ನು ನೋಡಿದರೆ ಅದರ ಕಾರಣಗಳು ಮತ್ತು ಅಂತಿಮ ಆಶಯದ ಬೇರುಗಳು ಭಾರತದ ಚರಿತ್ರೆಯಲ್ಲಿ ಆಳವಾಗಿ ಇವೆ. 1920ರ ದಶಕದಲ್ಲಿ ಪ್ರಕ್ರಿಯೆಯು ತೀವ್ರಗೊಂಡಿದೆ. 1923 ರಲ್ಲಿ ಹಿಂದೂ-ಮುಸ್ಲಿಂ ಗಲಭೆಗಳು ಪ್ರಧಾನ ರಾಜಕೀಯ ಪ್ರಶ್ನೆಯಾಗಿ ಬೆಳೆದಿವೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಖಿಲಾಫತ್ ಮತ್ತು ಅಸಹಕಾರ ಚಳುವಳಿಗಳು ದೊಡ್ಡದಾಗಿ ಬೆಳೆಯಲಾರಂಭಿಸಿದಾಗ ವಿವಿಧ ಕೋಮುಗಳ ನಡುವೆ ಸಾಮರಸ್ಯ ಕಂಡು ಬರುತ್ತಿತ್ತು. ಆದರೆ ಈ ಚಳುವಳಿಗಳು ಅಂತಿಮ ಘಟ್ಟವನ್ನು ತಲುಪಿದಾಗ ಈ ಜನತೆಯ ಐಕ್ಯತೆಯಲ್ಲಿ ಒಡಕು ಸ್ಪಷ್ಟವಾಗಿ ತಲೆದೋರಿತು.

ಚರಕಾ ಸಂಘ, ಸ್ವರಾಜ್ಯ ಪಾರ್ಟಿ, ಮುಂತಾದವುಗಳು ಹಿಂದೂ-ಮುಸ್ಲಿಂರುಗಳಿಗ ಸಂಬಂಧಿಸಿ ಪ್ರತ್ಯೇಕವಾಗಿ ಬೇಡಿಕೆಗಳನ್ನೆತ್ತಿ ಪ್ರಚಾರ ನಡೆಸತೊಡಗಿದರು. ಇಂತಹ ಸಭೆಗಳಲ್ಲಿ ಲಕ್ಷಾಂತರ ಜನರು ಭಾಗವಹಿಸಿದ್ದಾರೆ. ಘರ್ಷಣೆಗಳು ನಡೆದಾಗ ಡಜನ್‌ಗಟ್ಟಳೆ ಜನ ಸಾವಿಗೀಡಾಗಿ ನೂರಾರು ಜನ ಗಾಯಗೊಂಡಿದ್ದರೆ. ಇಂತಹ ಸನ್ನಿವೇಶದಲ್ಲಿ ಪರಸ್ಪರ ಸಮುದಾಯಗಳ ಸಭೆಗಳು ಜರುಗಿ- ಶ್ರದ್ಧಾಂಜಲಿ ಸಲ್ಲಿಸಿ, ದ್ವೇಷ ಉಕ್ಕುವಂತೆ ಮಾಡಲಾಗಿದೆ. ಈ ಕೆಲಸಗಳಲ್ಲಿ ಮುಂದಾಳತ್ವ ವಹಿಸಿದವರು ಖಿಲಾಫತ್ ಮತ್ತು ಸಹಕಾರ ಚಳುವಳಿಯಿಂದ ಬಂದವರೇ ಆಗಿದ್ದರು.

1923 ಡಿಸೆಂಬರ್‌ನಲ್ಲಿ ಕಾಕಿನಾಡದಲ್ಲಿ ಕಾಂಗ್ರೆಸ್‌ನ ಅಧಿವೇಶನ ಸೇರಿತ್ತು. ಖಿಲಾಫತ್ ಮತ್ತು ಅಸಹಕಾರ ಚಳುವಳಿಗಳೆರಡರಲ್ಲಿಯೂ ನಾಯಕರಾಗಿದ್ದ ಮೌಲಾನಾ ಮಹ್ಮದ್ ಅಲಿಯವರು ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದರು. ಆ ಸಬೆಯಲ್ಲಿ ಹಿಂದೂ-ಮುಸ್ಲಿಂ ಐಕ್ಯತೆಯ ಮಹತ್ವ ಹಾಗೂ ಲಾಭ-ನಷ್ಟಗಳ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.

ಆದರೆ ಮತಾಂತರ ಕಾರ್ಯಗಳು ಬಿರುಸಿನಿಂದಲೇ ನಡೆದಿದ್ದವು. ಕೆಲವು ಸ್ವಯಂ ಸೇವಾ ಸಂಸ್ಥೆಗಳು ಹಿಂದೂಗಳನ್ನು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿಸಿಕೊಳ್ಳತೊಡಗಿದ್ದರು. ಇಂತಹ ಸಂದರ್ಭವನ್ನುಪಯೋಗಿಸಿಕೊಂಡ ಮಾಳವೀಯನಂತಹ ಹಿಂದೂ ನಾಯಕರು 'ಹಿಂದೂಗಳ ಸಂಘಟನೆ' ಬಗ್ಗೆ ಪ್ರಚಾರ ಕೈಗೊಂಡಿದ್ದರಲ್ಲದೆ ಸಂಘಟನೆಗೆ ಉತ್ತಮ ಪ್ರತಿಕ್ರಿಯೆ ದೊರೆಯಿತು.

ಅಂದಿನ ಹಿಂದು-ಮುಸ್ಲಿಂ ನಾಯಕರುಗಳು ಎತ್ತಿದ್ದ ಪ್ರಶ್ನೆಗಳಾದರೂ ಎಂತದ್ದು? ಮಸೀದಿ ಮುಂದೆ ತಮಟೆ ಬಾರಿಸಬಾರದು ಹಿಂದೂಗಳ ಆಲದಮರ ತಮ್ಮ ಮೆರವಣಿಗೆ ಅಡ್ಡಿಯಾಗುತ್ತವೆಂದು ಮುಸ್ಲಿಂ ನಾಯಕರು ಆಕ್ಷೇಪಗಳನ್ನೆತ್ತಿದ್ದರೆ, ಈದ್‌ಮಿಲಾದ್ ದಿನಗಳಲ್ಲಿ ಬಯಲಿನೊಳಗೆ ಎತ್ತುಗಳನ್ನು ಕತ್ತರಿಸಬಾರದು ಎಂದು ಹಿಂದು ನಾಯಕರು ಆಕ್ಷೇಪಿಸಿದರು. ಇಂತಹವುಗಳು ಉದ್ರೇಕಕ್ಕೆಡೆ ಮಾಡಿ ಅಪಾರ ಸಾವು- ನೋವು ಸಂಭವಿಸಿದೆ. 1923 ರ ಹೊತ್ತಿನಲ್ಲಿ ಇಂತಹ ಕೋಮು ಘರ್ಷಣೆಗಳು ಕಲ್ಕತ್ತಾ, ದಿಲ್ಲಿ, ಹೈದ್ರಾಬಾದ್ ಸಂಸ್ಥಾನಕ್ಕೆ ಸೇರಿದ್ದ ಗುಲ್ಬರ್ಗಾ ಮುಂತಾದೆಡೆ ಸಂಭವಿಸಿದವು.

ಈಗ ಪಾಕಿಸ್ತಾನದಲ್ಲಿರುವ 'ಕೊಹಟ'-ಯಲ್ಲಿ ಅತ್ಯಂತ ದಾರುಣವಾದ ಕೋಮು ಘರ್ಷಣೆಗಳು ನಡೆದವು. ಇದರ ತನಿಖೆಗಾಗಿ 'ಇಂಡಿಯನ್‌ನ್ಯಾಷನಲ್ ಕಾಂಗ್ರೆಸ್' - –'ಗಾಂಧೀಜಿ ಮತ್ತು ಶೌಕತ್ ಅಲಿ' ಯವರನ್ನು ನೇಮಿಸಿತು. ಆದರೆ ಗಲಭೆ ಪೀಡಿತ ಪ್ರದೇಶಕ್ಕೆ ಗಾಂಧಿ ಮತ್ತು ಅಲಿಯವರ ಪ್ರವೇಶವನ್ನು ಸರಕಾರ ತಡೆಯಿತು. ಆದರೆ ಜನತೆ ತಮ್ಮ ಸಂಕಷ್ಟಗಳನ್ನು ಗಲಭೆಯ ಕಾರಣಗಳನ್ನು ಹೇಳಿಕೊಳ್ಳಲು ಇವರುಗಳು ತಂಗಿದ್ದ ಸ್ಥಳಕ್ಕೆ ಬಂದರು. ಅತ್ಯಂತ ದುರದೃಷ್ಟಕರ ಸಂಗತಿಯೆಂದರೆ ಈ ಗಲಭೆ ಆರಂಭಗೊಳ್ಳಲು ಮುಸ್ಲಿಂ ರು ಕಾರಣರೆಂದು ಗಾಂಧೀಜಿಯವರು ವರದಿ ನೀಡಿದ್ದರೆ, ಹಿಂದೂಗಳೇ ಇದಕ್ಕೆ ಕಾರಣವೆಂದು ಶೌಕತ್ ಅಲಿಯವರು ವರದಿ ಮಾಡಿದರು. ಜನ ಪ್ರೀತಿಸುತ್ತಿದ್ದ ಇಂತಹ ಮಹಾನ್ ನಾಯಕರು ಇಂತಹ ವರದಿಗಳನ್ನು ನೀಡಿದ್ದು ಭಾರೀ ಆತಂಕದಾಯಕವಾಗಿತ್ತು. ಕೋಮು ದಳ್ಳುರಿ ಆರುವುದಿರಲಿ ಮುಂದೆ ಅದು ಹತ್ತಿ ಉರಿಯತೊಡಗಿತು.

ಕೊಮು ಘರ್ಷಣೆಗಳು ಮತ್ತೆ ತೀವ್ರಗೊಂಡವು. ಇದರಲ್ಲಿ ಅಪಾರ ಜನಗಳ ಸಾವು, ಆಸ್ತಿಪಾಸ್ತಿ ಲೂಟಿ ಮುಂತಾದ ಘಟನೆಗಳು . ಗಾಂಧೀಜಿಯವರ ಮನ ಕಲಕಿದವು. 1924 ಸೆಪ್ಟೆಂಬರ್17ರಂದು ಗಾಂಧೀಜಿಯವರು 21 ದಿನಗಳ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿತು. ಈ ಕೋಮು ಘರ್ಷಣೆಗಳು ನಿಂತು ಐಕ್ಯತೆ ಮೂಡಿ ಬರುತ್ತದೆಂದು ಆಶಿಸಿದರು.

ಗಾಂಧೀಜಿಯವರ ಈ ಪ್ರಯತ್ನವು ಜನರ ಮನಸ್ಸು ತಿಳಿಯಾಗಲು ಸ್ವಲ್ಪ ಸಹಾಯವಾಗಿದೆ. ವಿವಿಧ ಕೋಮುಗಳ ಮುಖಂಡರು ಐಕ್ಯತೆಗಾಗಿ ಮನವಿ ಮಾಡಿದ್ದಾರೆ. ಐಕ್ಯತಾ ಸಮ್ಮೇಳನಗಳು ನಡೆದವು. ಅಕ್ಟೋಬರ್ 8 ನ್ನು 'ಐಕ್ಯತಾ ದಿನವನ್ನಾಗಿ'ಆಚರಿಸಲಾಗಿದೆ. ಆದರೆ ಇವುಗಳು ಪೂರ್ಣವಾಗಿ ಪರಿಹಾರ ಒದಗಿಸಲಿಲ್ಲ. ಮಸೀದಿ ಮುಂದೆ ತಮಟೆ ಬಾರಿಸುವುದು, ಗೋಹತ್ಯೆ ಪ್ರಶ್ನೆ, ಮತಾಂತರದಂತಹ ವಿಷಯಗಳು ಇತ್ಯರ್ಥವಾಗದೇ ಮುಂದುವರಿದವು.

1922 ರಿಂದ 1927 ರವರೆಗೆ ನಡೆದ ಘರ್ಷಣೆಗಳ ಬಗ್ಗೆ ಸರಕಾರ ನೀಡಿದ ಅಂಕಿ ಅಂಶಗಳಂತೆ 16 ಕಡೆಗಳಲ್ಲಿ ಗಲಭೆಗಳಾಗಿವೆ. ನಂತರ 450 ಜನ ಸತ್ತಿದ್ದಾರೆ. 5000 ಜನ ಗಾಯಗೊಂಡಿದ್ದಾರೆ. ದೇಶದ ವಿವಿದೆಡೆ 112 ಗಲಭೆಗಳು ಸಂಭವಿಸಿವೆ. ಅದರಲ್ಲಿ 1927ರಲ್ಲಿ 31.

ಅಂದಿನ ಸ್ಥಿತಿಯಲ್ಲಿ ಶಿಶು ಪ್ರಾಯದಲ್ಲಿದ್ದ ಕಮ್ಯುನಿಸ್ಟ್ ಚಳುವಳಿ- ಅದರ ಗುಂಪುಗಳು ಈ ಕೋಮು ಘರ್ಷಣೆಗಳು. ಬ್ರಿಟೀಷರ ಚಾಣಕ್ಯ ತಂತ್ರವಾಗಿದೆ ಮತ್ತು ಬಂಡವಾಳಗಾರ ಜಮೀನ್ದಾರರ ಒಂದು ಸಣ್ಣ ವಿಭಾಗವನ್ನು ರಕ್ಷಿಸಲು ನಡೆಸುತ್ತಿರುವ ನಾಜೂಕಿನ ಪ್ರಯತ್ನಗಳು ಇವೆಂದು ಅದನ್ನು ಬಯಲಿಗೆಳೆಯಲು ತೊಡಗಿದ್ದರು. ಕಾಂಗ್ರೆಸ್‌ನಲ್ಲಿ ಕೆಲವು ರಾಷ್ಟ್ರೀಯವಾದಿಗಳು ಸಹ ಈ ಅಭಿಪ್ರಾಯ ಹೊಂದಿದ್ದು.

1923 ಅಕ್ಟೋಬರ್ 1ರಲ್ಲಿ ಕಮ್ಯುನಿಸ್ಟ್ ಇಂಟರ್ ನ್ಯಾಷನಲ್‌ನ ಪ್ರತಿನಿಧಿ ಎಂ.ಎನ್. ರಾಯ್ ರವರ ಒಂದು ಲೇಖನ ಪ್ರಕಟಗೊಂಡಿತು. ಅದರಲ್ಲಿ 'ಹಿಂದು-ಮುಸ್ಲಿಂ ಐಕ್ಯತೆಯನ್ನು ಬೆಳೆಸುವುದು ಹೇಗೆ? ಎಂದು ಚರ್ಚಿಸಿದ್ದಾರೆ. ರಾಜಕೀಯ ಚಳುವಳಿಯನ್ನು ಮತೀಯ ತಳಹದಿಯಲ್ಲಿ ಕಟ್ಟಬೆಳೆಸಿದರೆ ಸಮಗ್ರತೆ ಎನ್ನುವುದು ಅಸಾಧ್ಯ. ಖಿಲಾಫತ್ ಸಂಘಟನೆ ವಿಸರ್ಜಿಸಿದರೆ ಈ ಪ್ರಶ್ನೆ ಬಗೆಹರಿಯಲಾರದು. ಕಾಂಗ್ರೆಸ್ ಸಹ ಇಂದಿನ ಸ್ಥಿತಿಯನ್ನು ತಿಳಿಯಾಗಿಸುವ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ದುಡಿಯುವ ಜನರ ಮೇಲೆ ಈ ಹೊಣೆ ಇದೆ. ಸ್ವಾತಂತ್ರ್ಯ ಚಳುವಳಿಯನ್ನು ಪುಡಿಗುಟ್ಟಲು ಹವಣಿಸುತ್ತಿರುವ ಬ್ರಿಟಿಷರ ಸಂಚನ್ನೂ ವಿಫಲಗೊಳಿಸಿ, ಹಿಂದು-ಮುಸ್ಲಿಂ ಐಕ್ಯತೆ ಕಾಪಾಡಿ ಎಂದು ಮನವಿ ಮಾಡಿದ್ದರು. ಈ ದಿನಗಳಲ್ಲಿಯೂ ಇದು ಅಷ್ಟೇ ಸತ್ಯದ ಮಾತು.

–ಇ.ಕೆ.ಎನ್.ರಾಜನ್.
–ಎಸ್.ವೈ.ಗುರುಶಾಂತ್

ದ.ಕ. ಜಿಲ್ಲಾ ಡಿ.ವೈ.ಎಫ್.ಐ. ವಾರ್ತೆ:

ಕುಮಾರ್,ಕುಂದಾಪುರ

ಡಿ.ವೈ.ಎಫ್.ಐ ಗೆ ಇದು ದಶಮಾನೋತ್ಸವದ ವರ್ಷ. ಹಲವು ತ್ಯಾಗ-ಬಲಿದಾನಗಳೊಂದಿಗೆ ದೃಢತೆಯೊಂದಿಗೆ ಸವಾಲುಗಳಿಗೆ ಉತ್ತರಿಸುತ್ತಲೇ ಸಾಗಿದ ಡಿವೈಎಫ್ಐ 75 ಲಕ್ಷ ಸದಸ್ಯ ಬಲದೊಂದಿಗೆ ಭಾರತದಲ್ಲೇ ಪ್ರಥಮ ಸ್ಥಾನವನ್ನು ಪಡೆದಿದೆ. ಕಳೆದ ಜಿಲ್ಲಾ ಸಮ್ಮೇಳನದ ಬಳಿಕ ಅತ್ಯಂತ ಚುರುಕಾಗಿ ಕಾರ್ಯನಿರ್ವಹಿಸುತ್ತಿರುವ ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ತನ್ನ ವಿವಿಧ ಚಟುವಟಿಕೆಗಳನ್ನು ಐಕ್ಯರಂಗ ಓದುಗರೊಂದಿಗೆ ಇಲ್ಲಿ ಹಂಚಿಕೊಂಡಿದೆ.

ಸದಸ್ಯತ್ವ:

5,333 ಸದಸ್ಯತ್ವದೊಂದಿಗೆ ಕಳೆದ ವರ್ಷ ರಾಜ್ಯದಲ್ಲೇ ಪ್ರಥಮ ಸ್ಥಾನ ಪಡೆದಿದ್ದ ದ.ಕ. ಜಿಲ್ಲಾ ಡಿವೈಎಫ್ಐ ಸಮಿತಿಯು ಈ ಬಾರಿ 10 ಸಾವಿರ ಸದಸ್ಯತ್ವ ಗುರಿ ತಲುಪಲು ಯೋಜನೆ ಹಾಕಿ ಕಾರ್ಯ ನಿರ್ವಹಿಸುತ್ತಿದೆ.

ಬಸ್ ಪ್ರಯಾಣ ದರ ಏರಿಕೆ: ಬೀದಿಗಿಳಿದ ಡಿವೈಎಫ್ಐ

ಲಾಭ ಬಡುಕ ಖಾಸಗಿ ಬಸ್ ಮಾಲೀಕರು ಇತ್ತೀಚೆಗೆ ಮಂಗಳೂರು ನಗರದಲ್ಲಿ ನಗರ ಹಾಗೂ ಗ್ರಾಮಾಂತರ ಪ್ರಯಾಣ ದರವನ್ನು ಏಕಾಏಕಿ ಶೇಕಡಾ 50 ರಷ್ಟು ಏರಿಸಿದರು. ಹೇಳಿಕೆಗಳನ್ನು ಮೀರಿ ಹೋರಾಡಲು ಯಾರೂ ಸಿದ್ಧರಾಗದಾಗ ಡಿವೈಎಫ್ಐ ಮತ್ತು ಎಸ್ಎಫ್ಐ ಸಮಿತಿಗಳು ಜಂಟಿಯಾಗಿ ಬೀದಿಗಿಳಿದವು.



ಜನತೆ ಪೂರ್ಣ ಬೆಂಬಲ ನೀಡಿದರು. ಪರಿಣಾಮವಾಗಿ ಮಾಲಿಕರು ಬಸ್ ರಸ್ತೆಗಿಳಿಸಲಿಲ್ಲ. ಸಿಪಿಐ(ಎಂ) ಸೇರಿದಂತೆ ಹಲವು ಸಂಘಟನೆಗಳು ಸ್ವರ ಸೇರಿಸಿದವು. ಒತ್ತಡಕ್ಕೆ ಮಣಿದ ಬಸ್ ಮಾಲಿಕರು ಮಾತುಕತೆಗೆ ಮುಂದಾದರು. ಡಿವೈಎಫ್ಐ, ಎಸ್ಎಫ್ಐ, ಸಿಪಿಐ(ಎಂ) ಸೇರಿದಂತೆ ಎಲ್ಲಾ ಹೋರಾಟಗಾರರ ಸಮ್ಮುಖದಲ್ಲಿ ಉತ್ತಮ ರೀತಿಯಲ್ಲಿ-ದರ ಕಡಿತದ ಒಪ್ಪಂದಕ್ಕೆ ಮಾಲಿಕರು ಸಹಿ ಹಾಕಿದರು.

ಡಿವೈ-ಎಫ್ಐಯ ಧೀಮಂತ ಹೋರಾಟ ಪತ್ರಿಕೆ ಹಾಗೂ ನಾಗರಿಕರ ಗಮನ ಸೆಳೆದವು.

ಡಿವೈಎಫ್ಐ ನೇತೃತ್ವದಲ್ಲಿ ಮಂಡಲ ಮುತ್ತಿದ ಪಟ್ರಮೆ ಗ್ರಾಮಸ್ಥರು

ಪಟ್ರಮೆ- ಮಂಗನ ಕಾಯಿಲೆ ಮೂಲಕ ರಾಜ್ಯಾದ್ಯಂತ ಸುದ್ದಿ ಮಾಡಿದಂತಹ ಗ್ರಾಮ. ಹಲವು ಪ್ರಾಣಗಳು ಈ ಕಾಯಿಲೆಗೆ ಬಲಿಯಾಗಿದ್ದವು. ದ.ಕ. ಜಿಲ್ಲೆಯಲ್ಲಿ ಅತ್ಯಂತ ಹಿಂದುಳಿದಿರುವ ಗ್ರಾಮ ಇದು. ಕುಗ್ರಾಮಗಳನ್ನು ಗುರುತಿಸುವ 'ಉದಯವಾಣಿ' ಸ್ಪರ್ಧೆಯಲ್ಲಿ ಈ ಗ್ರಾಮಕ್ಕೆ ಎರಡನೇ ಸ್ಥಾನ ದೊರೆತಿತ್ತು. ಪ್ರಾಥಮಿಕ ಆರೋಗ್ಯ ಕೇಂದ್ರ, ರಸ್ತೆ, ಬಸ್ಸಿನ ಸೌಕರ್ಯ ಯಾವುದೂ ಇಲ್ಲದ 21 ನೇ ಶತಮಾನದಲ್ಲೂ ಕಾಲ್ನಡಿಗೆಯೇ ಗತಿಯಾಗಿರುವ ಗ್ರಾಮ. ಜೊತೆಗೆ ಮಂಡಲ(ಕೊಕ್ಕಡ) ಪಂಚಾಯತ್ ಮಲತಾಯಿ ಧೋರಣೆ ಬೇರೆ. ಯಾವ ಪ್ರಗತಿ ಕಾರ್ಯಕ್ರಮಗಳೂ ಕಾಣದ ಈ ಗ್ರಾಮದಲ್ಲಿ ಹಲವು ಉತ್ಸಾಹಿ ಯುವಕರಿಂದ ಡಿವೈಎಫ್ಐ ಘಟಕದ ರಚನೆ. ಎರಡೇ ವಾರದಲ್ಲಿ ಎಲ್ಲಾ ಗ್ರಾಮಸ್ಥರೊಂದಿಗೆ ಮಂಡಲ ಮುತ್ತಿಗೆ. ಬಿಸಿಗೆ ಬೆಣ್ಣೆ ಕರಗಿತು! ಜಿಲ್ಲಾ ಪರಿಷತ್ ಪ್ರಧಾನ ಕಾರ್ಯದರ್ಶಿ ಗ್ರಾಮಕ್ಕೆ ಭೇಟಿ ನೀಡಿ ಅಗತ್ಯ ಸೌಲಭ್ಯದ ಭರವಸೆ ನೀಡಿದರು. ಈಗ ತಕ್ಷಣಕ್ಕೆ 76 ಸಾವಿರ ರೂಪಾಯಿ ಕಾಮಗಾರಿ ಜಾರಿಗೆ ಕ್ರಮ. ಡಿವೈಎಫ್ಐ ಹೋರಾಟ -ಕಾಲ್ನಡಿಗೆ ಜಾಥಾ ಫಲ ನೀಡಿತು.

ಸಾಕ್ಷರತಾ ಆಂದೋಲನದಲ್ಲಿ.........

ಕೇಂದ್ರ ಸರಕಾರದ ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ ರಾಜ್ಯದ ಬಿಜಾಪುರ ಮತ್ತು ದ.ಕ. ಜಿಲ್ಲೆಗಳು ಒಳಪಟ್ಟಿವೆ. ಬಿಜಾಪುರಕ್ಕೆ 3 ಹಾಗೂ ದ.ಕ. ಜಿಲ್ಲೆಗೆ 2 ಕೋಟಿ ರೂಪಾಯಿಗಳು ಬಿಡುಗಡೆಯಾಗಿದ್ದು, 10ರಿಂದ 40 ವರ್ಷ ವಯೋಮಾನದ ಅನಕ್ಷರಸ್ಥರನ್ನು, ಸಾಕ್ಷರರನ್ನಾಗಿಸುವ ಯೋಜನೆ ಜಾರಿಯಲ್ಲಿದೆ.

ದ.ಕ. ದಲ್ಲಿ ಈಗ ಲಭ್ಯವಾದ ಅಂಕಗಳ ರೀತ್ಯ ಉದ್ದೇಶಿತ ಗುರಿಯೊಳಗೆ ಎರಡೂವರೆ ಲಕ್ಷ ಅನಕ್ಷರಸ್ಥರಿದ್ದು ಇವರ ಕಲಿಕೆಯ ಕಾರ್ಯ ಅಕ್ಟೋಬರ್ ಎರಡರಿಂದ ಆರಂಭವಾಗಲಿದೆ. ಮಾರ್ಚ್ 31 ಕ್ಕೆ ಯೋಜನೆ ಕೊನೆಗೊಳ್ಳಲಿದೆ. ಜಿಲ್ಲಾ ಪರಿಷತ್ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಜಂಟಿ ಸಹಯೋಗದಲ್ಲಿ ಕಾರ್ಯಕ್ರಮ ರೂಪಿಸಲ್ಪಡುತ್ತದೆ.

ಒಟ್ಟು 36 ಸ್ವಯಂ ಸೇವಾ ಸಂಸ್ಥೆಗಳ 140 ಕಾರ್ಯಕರ್ತರು ಆಂದೋಲನದಲ್ಲಿ ಕಾರ್ಯ ಪ್ರವೃತ್ತರಾಗಿದ್ದು- ಇವುಗಳಲ್ಲಿ ಬಹುಪಾಲು ಕಾರ್ಯಕರ್ತರು ವಿದೇಶಗಳಿಂದ ಮತ್ತು ಕ್ರೈಸ್ತ ಮಿಶನರಿಗಳಿಂದ ಹಣ ಪಡೆದು 'ಪರಿಸರ ಸುಧಾರಣೆ' 'ಸ್ವಯಂ ಸೇವೆ' ಮಾಡುವ ಸಂಸ್ಥೆಗಳಿಂದ ಬಂದವರೇ ಆಗಿದ್ದು ಆಂದೋಲನದ ದೊಡ್ಡ ಕಪ್ಪು ಚುಕ್ಕೆಯಾಗಿದೆ. ಈ ಬಗ್ಗೆ ಅತೀವ ಜಾಗೃತಿ ವಹಿಸಿ ಪೂರ್ಣವಾಗಿ ಈ ಆಂದೋಲನ 'ವಿದೇಶಿ ಕೃಪಾಪೋಷಿತ' ವ್ಯಕ್ತಿಗಳ ಕೈವಶವಾಗುವುದನ್ನು ತಪ್ಪಿಸುವಲ್ಲಿ ಜಿಲ್ಲೆಯ ಡಿವೈಎಫ್ಐ ಮುಖ್ಯವಾಗಿ ಸಮುದಾಯ ಯಶಸ್ವಿಯಾಗಿದೆ. 13 ಜನ ಕಾರ್ಯಕರ್ತರು ಆಂದೋಲನದಲ್ಲಿ ದುಡಿಯುತ್ತಿದ್ದಾರೆ. ಜಿಲ್ಲಾ ಡಿವೈಎಫ್ಐ ಕಾರ್ಯಕರ್ತ ಆರ್. ಜಯಕುಮಾರ್, ಜನವಾದಿ ಮಹಿಳಾ ಸಂಘಟನೆಯ ಎಸ್.ಆರ್. ಲೀಲಾವತಿ ಆಂದೋಲನದ ಜಿಲ್ಲಾ ಸಮಿತಿ ಸದಸ್ಯರಾಗಿರುತ್ತಾರೆ. ಕುಂದಾಪುರ ಉಪಯೋಜನೆಯ ಪೂರ್ಣ ಜವಾಬ್ದಾರಿ ಡಿವೈಎಫ್ಐ, ಸಮುದಾಯ ಸಂಗಾತಿಗಳು ವಹಿಸಿ ದುಡಿಯುತ್ತಿದ್ದು ಕಾಂಗ್ರೆ, ಬಿಜೆಪಿ, ಹಾಗೂ ಇತರೇ ಸ್ಥಾಪಿತ ಹಿತಾಸಕ್ತಿಗಳಿಗೆ ಸವಾಲಾಗಿ ಪರಿಣಮಿಸಿದೆ. 'ಸ್ಥಳೀಯ ಶಾಸಕರುಗಳು ಜಿಲ್ಲಾ ಪರಿಷತ್ ಸಭೆಗಳಲ್ಲಿ 'ಡಿವೈಎಫ್ಐ ತನ್ನ ರಾಜಕೀಯ ಸಿದ್ಧಾಂತಕ್ಕೆ ಸಾಕ್ಷರತಾ ಆಂದೋಲನವನ್ನು ಬಳಸುತ್ತಿದೆ' ಎಂದು ಆರೋಪಿಸಿದರು. ಪತ್ರಿಕೆಗಳು ಈ ಬಗ್ಗೆ ಸಂಪಾದಕೀಯ ಬರೆದವು. ಡಿವೈ-ಎಫ್ಐ ಈ ಬಗ್ಗೆ ಉತ್ತರಿಸುತ್ತಲೇ ' ಜನರಿಗೆ ಶಿಕ್ಷಣ ನೀಡುವುದು ನಮ್ಮ ಕರ್ತವ್ಯ ' ಎಂಬ ನೆಲೆಯಲ್ಲಿ ಜಿಲ್ಲೆಯಾದ್ಯಂತ ವ್ಯಾಪಕವಾಗಿ ಆಂದೋಲನದ ಪ್ರಚಾರದಲ್ಲಿ ತೊಡಗಿದೆ. ಹಲವಾರು ಗ್ರಾಮಗಳನ್ನು ದತ್ತು ಸ್ವೀಕರಿಸಿದೆ. ನೂರಾರು ಸ್ವಯಂ ಸೇವಕರನ್ನು ಆಂದೋಲನದ ಕ್ರಿಯೆಗಳಿಗೆ ಇಳಿಸಿದೆ.

ವಿಚಾರ ಸಂಕಿರಣ:

ಸಾಕ್ಷರತಾ ಆಂದೋಲನದ ಬಗ್ಗೆ ಡಿವೈಎಫ್ಐ ನಿಲುವು ವ್ಯಕ್ತ ಪಡಿಸುವ ಜಿಲ್ಲಾ ಮಟ್ಟದ ವಿಚಾರ ಸಂಕಿರಣವೊಂದನ್ನು 25-9-90 ರಂದು ಮಂಗಳೂರಿನ ಪುರಭವನದಲ್ಲಿ ಡಿವೈಎಫ್ಐ ಸಂಘಟಿಸಿತು. ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತಿನ ಸಿ.ರಾಮಕೃಷ್ಣನ್ ಇದರಲ್ಲಿ ಪಾಲ್ಗೊಂಡಿದ್ದಾರೆ.

21 ರಂದು ಕುಂದಾಪುರ ಡಿವೈಎಫ್ಐ ಘಟಕವು ಸಾಕ್ಷರತಾ ಆಂದೋಲನದ ಬಗ್ಗೆ ವಿಚಾರ ಸಂಕಿರಣವೊಂದನ್ನು ಯಶಸ್ವಿಯಾಗಿ ನಡೆಸಿತು.

ಗಮನ ಸೆಳೆದ ಗೋಡೆಬರಹ

ಡಿವೈಎಫ್ಐ ಧ್ಯೇಯೋದ್ದೇಶಗಳನ್ನು ಹಾಗೂ ಸಾಕ್ಷರತಾ ಆಂದೋಲನದ ಮಹತ್ವ- ಶಿಕ್ಷಣದ ಮಹತ್ವ ತಿಳಿಸುವ ಗೋಡೆ ಬರಹಗಳನ್ನು ನಿರಂತರವಾಗಿ 6 ವಾರಗಳ ಕಾಲ ಮಂಗಳೂರು ನಗರದಲ್ಲಿ ನಡೆಸಲಾಗಿದ್ದು - ಸುಂದರವಾದ ಬರಹಗಳು ನಾಗರೀಕರ ಅತೀವ ಪ್ರಶಂಸೆಗೆ ಒಳಪಟ್ಟಿವೆ. ಕುಪ್ಪೆಪದವು ಘಟಕವು 1 1 ಕೀ.ಮೀ. ದೂರದವರೆಗೆ ಕಾಲ್ನಡಿಗೆಯಲ್ಲಿ ರಾತ್ರಿ ಇಡೀ ಸಂಚರಿಸಿ ಗೋಡೆಬರಹ ಮಾಡಿ ದಾಖಲೆ ಸ್ಥಾಪಿಸಿದೆ.

ಶ್ರಮದಾನಗಳ ಸರಮಾಲೆ

ಬೇಜವಾಬ್ದಾರಿ ಸರಕಾರ ಇಲ್ಲವೇ ಸ್ಥಳೀಯ ಸಂಸ್ಥೆಗಳು ಜನರ ಸಂಕಷ್ಟಕ್ಕೆ ಒದಗದೆ- ಸತಾಯಿಸಿದಾಗ ಜನ ಸ್ವತ: ಒಂದಾಗಿ ಕೆಲವು ಕಾರ್ಯಕ್ರಮಗಳನ್ನು ರೂಪಿಸಿ ಪರಿಸರ ಮತ್ತು ಬದುಕು ರೂಪಿಸುವುದು ಅಪರೂಪವಾದರೂ ಆಗಾಗ್ಗೆ ನಡೆಯುವ ಕಾರ್ಯ. ದ.ಕ. ಜಿಲ್ಲೆಯ ಹಲವು ಭಾಗಗಳಿಂದ ಊರು, ರಸ್ತೆ, ಶಾಲೆ, ವೈದ್ಯರು- ಇಂತಹ ಪ್ರಶ್ನೆಗಳಲ್ಲಿ ಡಿವೈಎಫ್ಐ ಮಧ್ಯಪ್ರವೇಶಿಸಿ ದುಡಿದಿರುವ ವರದಿಗಳು ಬರುತ್ತಲಿದೆ.

ಧರ್ಮಸ್ಥಳ- ಯಾರಿಗೆ ಗೊತ್ತಿಲ್ಲದ ಸ್ಥಳ ಆದರೆ ಇಲ್ಲಿನ ಪರಿಸರದ ಜನರ ಬದುಕಿನ ಬವಣೆ ಮತ್ತು ಸಂಕಷ್ಟ ದೂರದೂರಿನಲ್ಲಿರುವ ' ಪುಣ್ಯ ಕ್ಷೇತ್ರ'ದ ನಾಮ ಮಹಿಮೆಯಷ್ಟು ಪ್ರಚಲಿತವಲ್ಲ. ಪಾಳೆಗಾರಿ ಮತ್ತು ಮತ ಮೌಢ್ಯದ- ಬೆದರಿಕೆಯ ವಾತಾವರಣದಲ್ಲಿ ನರುಗಿದ ಧರ್ಮಸ್ಥಳ ಪರಿಸರದ ಜನ ನಿಧಾನವಾಗಿಯಾದರೂ ಜಾಗ್ರತರಾಗಿದ್ದಾರೆ. ರೈತ ಸಂಘದ ಚಟುವಟಿಕೆ- ಪದ್ಮಲತಾ ಕೊಲೆ ಪ್ರಕರಣ ಇಲ್ಲಿ ವಿದ್ಯುತ್ ಸಂಚಾರ ಉಂಟು ಮಾಡಿತು. ಈಗ ಡಿವೈಎಫ್ಐ ಹೆಜ್ಜೆ ಇರಿಸಿದೆ. 19-9-90 ರಂದು ಧರ್ಮಸ್ಥಳ-ಮಂದೂರು ಮಡುವಿನ 5 ಕೀ.ಮೀ. ರಸ್ತೆಯನ್ನು ಸಂಘಟನೆಯು ಗ್ರಾಮಸ್ಥರೊಡಗೂಡಿ(ದಿನ ಪೂರ್ತಿ 48 ಜನರ ಶ್ರಮ) ದುರಸ್ತಿಗೊಳಿಸಿತು.



ಕುಂದಾಪುರದ ಮದ್ದು ಗುಡ್ಡೆಯಲ್ಲಿಡಿವೈಎಫ್ಐ-ಶಾಲೆಗೆ ಶ್ರಮದಾನದ ಮೂಲಕ ರಸ್ತೆ ಮಾಡಿದೆ. ಬಂಟ್ವಾಳ ತಾಲೂಕಿನ ಮೇರೆ ಮಜಲು- ಹಿಂದೂ, ಮುಸ್ಲಿಂ,ಕ್ರೈಸ್ತ ಧರ್ಮೀಯರು ಅತ್ಯಂತ ಸಮತೋಲನದಲ್ಲಿರುವ ಗ್ರಾಮ. ಕೋಮುವಾದದ ಹುಳಿ ಹಿಂಡಲು ಫ್ಯಾಸಿಸ್ಟ್ ಸಂತತಿಯವರು ನಿರಂತರ ಪ್ರಯತ್ನಿಸುತ್ತಲೇ ಹಲವು ಗಲಭೆಗಳೂ ಇಲ್ಲಿ ನಡೆದಿವೆ. ಇತ್ತೀಚೆಗೆ ಇಲ್ಲಿ ಡಿವೈಎಫ್ಐ 2 ದಿನಗಳ ಕಾಲ ರಸ್ತೆದುರಸ್ತಿಯ ಶ್ರಮದಾನ ಮಾಡಿದೆ. 5 ಸೆಂಟ್ಸ್ ಭೂಮಿಯ ವಾಸಿಗಳಿಗೆ ಅಗತ್ಯ ನೀರು ಮತ್ತು ವಿದ್ಯುತ್ ಸೌಲಭ್ಯಕ್ಕಾಗಿ ಈಗ ಶ್ರಮಿಸುತ್ತಿದೆ.

ಮಂಗಳೂರಿನ ಕುಪ್ಪೆಪದವು ಘಟಕವೂ ಶ್ರಮಾದಾನದ ಮೂಲಕ ರಸ್ತೆ ದುರಸ್ತಿಗೊಳಿಸಿ ನಾಗರೀಕರ ಪ್ರಶಂಸೆ ಪಡೆದಿದೆ.

ಉಕ್ಕಿನ ಕಾರ್ಖಾನೆಗಾಗಿ ಪಂಜಿನ ಮೆರವಣಿಗೆ

ವಿಜಯನಗರ ಉಕ್ಕಿನ ಕಾರ್ಖಾನೆಗೆ ಆಗ್ರಹಿಸಿ ರಾಜ್ಯದಾದ್ಯಂತ ಸೆ.15 ರಂದು ಸಂಘಟಿಸಲಾದ ಚಳುವಳಿಯನ್ನು ವಿಶಿಷ್ಟವಾಗಿ ಮಂಗಳೂರಿನಲ್ಲಿ ನಡೆಸಲಾಯಿತು. ಡಿವೈಎಫ್ಐ ಮತ್ತು ಎಸ್ಎಫ್ಐ ಸಮಿತಿಗಳ ಆಶ್ರಯದಲ್ಲಿ ಮಂಗಳೂರಿನ ಬಾವುಟ ಗುಡ್ಡದಿಂದ ಮೊದಲ್ಗೊಂಡು-ನಗರದ ಮುಖ್ಯ ರಸ್ತೆಗಳ ಮೂಲಕ ಹಾದು ಪುರಭವನದವರೆಗೆ ಯುವಜನತೆ ಪಂಜಿನ ಮೆರವಣಿಗೆ ನಡೆಸಿತು. ನಾಗರೀಕರ ಅತೀವ ಗಮನ ಸೆಳೆದ ಈ ಕಾರ್ಯಕ್ರಮದ ಸಮಾರೋಪವಾಗಿ ಪುರಭವನದ ಆವರಣದಲ್ಲಿ ನಡೆದ ಸಭೆಯಲ್ಲಿ ಮಾತಾಡಿದ ಮುಂದಾಳುಗಳಾದ ಆರ್.ಜಯಕುಮಾರ್, ಜೆ.ಸದಾಶಿವ ರೆಡ್ಡಿ, ವಸಂತ ಆಚಾರ್ ರವರುಗಳು ಸರಕಾರದ ವಿಳಂಬ ನೀತಿಯನ್ನು ಖಂಡಿಸಿದರು.

ದಶಮಾನೋತ್ಸವ ಸಮಿತಿ

ಡಿವೈಎಫ್ಐ ದಶಮಾನೋತ್ಸವ ವರ್ಷದಲ್ಲಿದ್ದು ನಾನಾ ತೆರನಾದ ಕಾರ್ಯಕ್ರಮ ರೂಪಿಸಲು ದ.ಕ. ಜಿಲ್ಲಾ ಡಿವೈಎಫ್ಐ ಸಮಿತಿ ನಿರ್ಧರಿಸಿ- ಈ ನಿಟ್ಟಿನಲ್ಲಿ ದಶಮಾನೋತ್ಸವ ಸಮಿತಿ ರಚಿಸಲಾಗಿದೆ. ಅಧ್ಯಕ್ಷರಾಗಿ ಸಾಹಿತಿ- ಫಕೀರ್ ಮಹಮ್ಮದ್ ಕಟ್ಪಾಡಿ ಕಾರ್ಯನಿರ್ವಹಿಸುತ್ತಿದ್ದು, ಕಾರ್ಯದರ್ಶಿಯಾಗಿ ಆರ್. ಜಯಕುಮಾರ್, ಉಪಾಧ್ಯಕ್ಷರಾಗಿ ಫಣಿರಾಜ್, ಬಿ.ಎಮ್. ಮಾಧವ, ಸಹಕಾರ್ಯದರ್ಶಿ ವಾಸುದೇವ ಉಚ್ಚಿಲ್, ಖಜಾಂಚಿಯಾಗಿ ಚಂದ್ರಹಾಸ್ ಆಯ್ಕೆಯಾದರು.

ನಿಮ್ಮ ಪ್ರಶ್ನೆ-ನಮ್ಮ ಉತ್ತರ

ಮಾರ್ಕ್ಸ್‌ವಾದಿ - ಲೆನಿನ್‌ವಾದಿ ದೃಷ್ಟಿಕೋನದಲ್ಲಿ ಚಿಂತಿಸುವವರಿಗೆ ತೃತೀಯ ಜಗತ್ತು ಎಂಬ ವರ್ಗೀಕರಣ ಎಷ್ಟು ಸರಿ? ಇದು ಬಂಡವಾಳಶಾಹಿಗಳ ವರ್ಗೀಕರಣವಲ್ಲವೇ?

—ಕೆ.ಕೆ. ಮಂಗಳೂರ್, ದಾವಣಗೆರೆ

ಈಗಿನಕಾಲಾವಧಿಯನ್ನು ಬಂಡವಾಳಶಾಹಿ ಪದ್ಧತಿಯ ವಿರುದ್ಧ ಹೋರಾಟ ಮತ್ತು ಅದು ಸಮಾಜವಾದದತ್ತ ಹೋಗುವ ಸಂಕ್ರಮಣ ಕಾಲ ಎಂಬುದು ಮಾರ್ಕ್ಸ್‌ವಾದಿ--ಲೆನಿನ್‌ವಾದಿ ದೃಷ್ಟಿಕೋನ ಎನ್ನುವುದು ನಿಜ. ಆದ್ದರಿಂದ ಈಗ ಎರಡು ವ್ಯವಸ್ಥೆಗಳನ್ನು ಮುಖ್ಯವಾಗಿ ಗಮನಿಸಲಾಗುತ್ತಿದೆ. ಆದರೆ ಲೆನಿನ್‌ರ ಕಾಲದಿಂದಲೂ ಸಾಮ್ರಾಜ್ಯಶಾಹಿಗಳು ಮತ್ತು ಅವರ ಅಡಿಯಾಳಾಗಿರುವ ವಸಾಹತು ದೇಶಗಳನ್ನು ಎರಡು ಬೇರೆ ವರ್ಗದ ದೇಶಗಳಾಗಿ ನೋಡಲಾಗುತ್ತಿತ್ತು. ಈ ಎರಡು ವರ್ಗದ ದೇಶಗಳಲ್ಲಿ ಕ್ರಾಂತಿಯ ರಣನೀತಿಯೂ ಸಂಪೂರ್ಣ ಬೇರೆಬೇರೆಯಾಗಿದ್ದವು. ಸಮಾಜವಾದಿ ದೇಶಗಳು ಒಂದು ಬಣವಾಗಿ ರೂಪುಗೊಂಡದ್ದು ಎರಡನೆಯ ಮಹಾಯುದ್ಧದ ನಂತರ. ಈ ವಸಾಹತುಗಳು ಸ್ವತಂತ್ರವಾದದ್ದೂ ಇದೇ ಕಾಲದಲ್ಲಿ. ಈ ದೇಶಗಳಲ್ಲಿ ಬಂಡವಾಳಶಾಹಿ ಅಧಿಪತ್ಯ ಪ್ರಬಲವಾಗಿದ್ದರೂ ಸ್ವತಂತ್ರವಾದ ಮೇಲೂ ಸಾಮ್ರಾಜ್ಯಶಾಹಿಗಳ ನವವಸಾಹತುಶಾಹಿ ಶೋಷಣೆ ಮುಂದುವರಿಯಿತು. ಈ ದೇಶಗಳು ಬೆಳವಣಿಗೆಯ ದೃಷ್ಟಿಯಿಂದ ಬೇರೆ ಬೇರೆ ದಾರಿ ಹಿಡಿದವು. ಕೆಲವು ಬಂಡವಾಳಶಾಹಿಯ ದಾರಿ ಹಿಡಿದರೆ, ಇನ್ನು ಕೆಲವು 'ಜನತಾ ಪ್ರಜಾಪ್ರಭುತ್ವ' ಅಥವಾ ಇನ್ನಿತರ ಹಾದಿ ಹಿಡಿದವು. ಆದರೆ ಇವೆಲ್ಲಕ್ಕೂ ಸಮಾನವಾದ ಹಿತಾಸಕ್ತಿಗಳಿವೆ, ಸಮಸ್ಯೆಗಳಿವೆ. ಇದೇ 'ಅಲಿಪ್ತ ಚಳುವಳಿ'ಗೆ ಸೈದ್ಧಾಂತಿಕ ಬುನಾದಿ. ಈ ವರ್ಗದ ಕೆಲವು ದೇಶಗಳಲ್ಲಿ (ಭಾರತವೂ ಸೇರಿದಂತೆ) ಬಲಶಾಲಿ ಬೂರ್ಜ್ವಾ ವರ್ಗ ಆಳುವ ವರ್ಗಗಳಲ್ಲಿವೆ. ಆದರೆ ಈ ದೇಶಗಳೂ ಸಾಮ್ರಾಜ್ಯಶಾಹಿಯ ಜತೆ ವೈರುಧ್ಯ ಹೊಂದಿವೆ. ಸಾಮ್ರಾಜ್ಯಶಾಹಿ ಜತೆ ವೈರುಧ್ಯ 'ತೃತೀಯ' ಜಗತ್ತಿನ ಈ ದೇಶಗಳ ಒಂದು ಸಮಾನ ಗುಣ. ಇದಲ್ಲದೆ ಸಾಮ್ರಾಜ್ಯಶಾಹಿ ದೇಶಗಳಲ್ಲಿರುವುದು 'ಪೂರ್ಣ' ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ವ್ಯವಸ್ಥೆ. ಆದರೆ ಈ ತೃತಿಯ ಜಗತ್ತಿನ ದೇಶಗಳಲ್ಲಿ ಬಂಡವಾಳಶಾಹಿ ಇರುವಲ್ಲಿ ಸಹ, ಹಿಂದಿನ ಹಂತದ ಅಂದರೆ ಪಾಳೆಯಗಾರಿ , ಮತ್ತು ಇನ್ನೂ ಹಿಂದಿನ ಉತ್ಪಾದನಾ ವ್ಯವಸ್ಥೆಯ ಬೇರುಗಳು ಇನ್ನೂ ಸಾಕಷ್ಟು ಭದ್ರವಾಗಿದೆ. ಅದರಲ್ಲೂ ಬೇಕಾದಷ್ಟು ವೈವಿಧ್ಯಗಳಿವೆ. ಆದರೆ ಈ ವರ್ಗದ ಯಾವುದೇ ದೇಶದಲ್ಲಿ ಪೂರ್ಣ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ವ್ಯವಸ್ಥೆ ಅಥವಾ ಸಮಾಜವಾದಿ ವ್ಯವಸ್ಥೆ ಇದೆ ಎನ್ನಲಾಗದು.

ಆದ್ದರಿಂದ ಈ ಗುಂಪಿನ ದೇಶಗಳಿಗೆ(ಭಾರತ ಸೇರಿದಂತೆ) ತೃತೀಯ ಜಗತ್ತು ಎನ್ನುವುದು ತಪ್ಪಾಗಲಾರದು. ಮಾರ್ಕ್ಸ್‌ವಾದಿ-ಲೆನಿನ್‌ವಾದಿ ದೃಷ್ಟಿಕೋನದಿಂದ ಯಾವುದೇ ಕಮ್ಯುನಿಸ್ಟ್ ಪಕ್ಷ ಸಾಮಾನ್ಯವಾಗಿ ಈ ಅವಧಿಯ ಅವಲೋಕನ ಮಾಡುವಾಗ (ನಮ್ಮ ಪಕ್ಷ ಸೇರಿದಂತೆ) ನಾಲ್ಕು ರೀತೀಯ ವೈರುಧ್ಯಗಳ ಬೆಳವಣಿಗೆ ಬಗ್ಗೆ ವಿವೇಚಿಸುತ್ತಾರೆ. ಆ ನಾಲ್ಕು ವೈರುಧ್ಯಗಳು- - ಸಾಮ್ರಾಜ್ಯಶಾಹಿ ಮತ್ತು ಸಮಾಜವಾದಿ ಬಣಗಳ ನಡುವೆ, ಸಾಮ್ರಾಜ್ಯಶಾಹಿ ಮತ್ತು ಮೂರನೆಯ ಜಗತ್ತಿನ ದೇಶಗಳ ನಡುವೆ, ಸಾಮ್ರಾಜ್ಯಶಾಹಿ ದೇಶಗಳ ನಡುವೆ, 'ಬಂಡವಾಳಶಾಹಿ ದೇಶಗಳಲ್ಲಿ ಆಳುವ ಮತ್ತು ಕಾರ್ಮಿಕವರ್ಗದ ನಡುವೆ. ನಮ್ಮ ಎಲ್ಲಾ ಮಹಾಧಿವೇಶಗಳಲ್ಲೂ ರಾಜಕೀಯ ನಿರ್ಣಯಗಳಲ್ಲೂ 'ಮೂರನೆಯ ಜಗತ್ತು' ಎಂಬ ಅಂಶ ಬಳಸಲಾಗುತ್ತದೆ.

ಸ್ವಲ್ಪದರಲ್ಲಿ ಹೇಳುವುದಾದರೆ ಮೂರನೆಯ ಜಗತ್ತಿನ ದೇಶಗಳು ಮಾಜಿ ವಸಾಹತುಶಾಹಿ, ಇನ್ನೂ ನವವಸಾಹತುಶಾಹಿ ಶೋಷಣೆಯಿಂದ ತತ್ತರಿಸುತ್ತಿರುವ ದೇಶಗಳು ಎನ್ನಬಹುದು.

ಮಾವೋರವರ ಮೂರು ಪ್ರಪಂಚದ ತತ್ವ ಲೆನಿನ್‌ರವರ ಕಲ್ಪನೆಯನ್ನು ಸಂಪೂರ್ಣವಾಗಿ ವಿರೂಪಗೊಳಿಸಿತು. ಅದುದರಿಂದ ಕೆಲವರಿಗೆ ಮೂರನೆಯ ಜಗತ್ತು ಎಂಬುದೇ ಮಾರ್ಕ್ಸ್‌ವಾದಿ ವಿರೋಧಿಯಂತೆ ಕಾಣಿಸಲಿಕ್ಕೆ ಸಾಕು. ಮಾವೋರವರ ಮೂರು ಪ್ರಪಂಚಗಳಿಗೂ ಲೆನಿನ್‌ರವರ ಸಾಮ್ರಾಜ್ಯಶಾಹಿ ಎಂಬ ಕೃತದ ಫಲವಾಗಿ ವೈಜ್ಞಾನಿಕವಾಗಿ ಗುರುತಿಸಲಾಗುತ್ತಿರುವ ಮೂರು ಜಗತ್ತುಗಳಿಗೂ ಆಧಾರ ಸಂಬಂಧವಿಲ್ಲ.

ಮೀಸಲಾತಿ ವಿರೋಧಿಚಳುವಳಿ —ನಿಜ

[illegible]

ಮಾತಾದಿ ಹೆಸರಿನಲ್ಲಿ....

[illegible]

ನು?

ಪ್ರಸಾರ ಭಾರತಿ
ಜನ ನಿಯಂತ್ರಣವೋ, ಬಂಡವಾಳಶಾಹಿ ನಿಯಂತ್ರಣವೋ?

ಪಂಜಾಬ್‌ನಲ್ಲಿ ರಾಷ್ಟ್ರಪತಿ ಆಡಳಿತ ವಿಸ್ತರಣೆ

ಸಾಮ್ರಾಜ್ಯಶಾಹಿ ಬೆಂಬಲಿತ ಸಿಖ್ ಭಯೋತ್ಪಾದಕರಿಂದ ಪ್ರತ್ಯೇಕ 'ಖಲಿಸ್ತಾನ'ಕ್ಕಾಗಿ ಚಳುವಳಿ ನಡೆಯುತ್ತಿರುವ ಪಂಜಾಬ್‌ನಲ್ಲಿ ರಾಷ್ಟ್ರಪತಿ ಆಡಳಿತವನ್ನು ಇನ್ನೂ ಆರು ತಿಂಗಳಿಗೆ ವಿಸ್ತರಿಸಲಾಗುವುದು. ಇದಕ್ಕೆ ಅವಕಾಶ ಕೋರುವ ಸಂವಿಧಾನದ 76ನೇ ತಿದ್ದುಪಡಿ ಮಸೂದೆಯನ್ನು ಸಂಸತ್ತು ಅಕ್ಟೋಬರ್ 5 ರಂದು ಅಂಗೀಕರಿಸಿದೆ.

ಕಾಂಗ್ರೆಸ್(ಐ)ನ ಕಣ್ಣುಮುಚ್ಚಾಲೆ ಆಟದಿಂದಾಗಿ ಈ ಕುರಿತ 75ನೇ ತಿದ್ದುಪಡಿ ಮಸೂದೆ ವಿಶೇಷ ಅಧಿವೇಶನದ ಮೊದಲ ದಿನವಾದ ಅಕ್ಟೋಬರ್ 1ರಂದು ಬಿದ್ದು-ಹೋಯಿತು.(ವಿವರ : ಐಕ್ಯರಂಗ, ಅಕ್ಟೋಬರ್ 7) .

ಪಂಜಾಬ್‌ನಲ್ಲಿ ಚುನಾವಣೆಗಳನ್ನು ನಡೆಸಲು ಪರಿಸ್ಥಿತಿ ಪಕ್ವವಾಗಿಲ್ಲದಿರುವುದರಿಂದ ಅಲ್ಲಿ ರಾಷ್ಟ್ರಪತಿ ಆಡಳಿತವನ್ನು ವಿಸ್ತರಿಬೇಕಾದ ಅವಶ್ಯಕತೆಯನ್ನು ಸಿಪಿಐ(ಎಂ) ಸಹಿತ ಎಡಪಕ್ಷಗಳು ಮತ್ತು ಬಿಜೆಪಿ ಪ್ರತಿಪಾದಿಸಿದ್ದುವು. ಕಾಂಗ್ರೆ ಮಾತ್ರ 'ಅದ್ದಗೋಡೆ ಮೇಲಿನ ದೀಪದಂತೆ' ವರ್ತಿಸಿತ್ತು.

ಅಕ್ಟೋಬರ್ 1ರಂದು ಬೆಂಬಲಿಸದೆ ಮಸೂದೆ ಸೋಲಲು ಕಾರಣವಾಗಿದ್ದ ಕಾಂಗ್ರೆ ತೀವ್ರ ಟೀಕೆಗೊಳಗಾದ ಮೇಲೆ ಅ.5ರಂದು ಬೆಂಬಲ ನೀಡಿತು. ತಾಂತ್ರಿಕ ಕಾರಣಗಳಿಗಾಗಿ 76ನೇ ತಿದ್ದುಪಡಿ ಮಸೂದೆಯಾಗಿ ಮಂಡಿಸಲ್ಪಟ್ಟು ಅದು ಮೂರನೇ ಎರಡಕ್ಕಿಂತ ಹೆಚ್ಚು ಮತಗಳಿಂದ ಲೋಕಸಭೆಯಲ್ಲಿ ಅಂಗೀಕಾರವಾಯಿತು. ರಾಜ್ಯ ಸಭೆಯೂ ಅಂಗೀಕರಿಸಿತು.

ಪಂಜಾಬ್‌ನಲ್ಲಿ ಚುನಾವಣೆಗಳು ನಡೆಯುವಂತಹ ವಾತಾವರಣ ನಿರ್ಮಾಣಕ್ಕೆ ಎಲ್ಲಾ ಪಕ್ಷಗಳು ಸಹಕಾರ ನೀಡಬೇಕೆಂದು ಮಸೂದೆಯನ್ನು ಮಂಡಿಸಿದ ಗೃಹಸಚಿವ ಮಫ್ತಿ ಮಹಮ್ಮದ್ ಸಯಿದ್ ಹೇಳಿದರು.

ಹಿಂದೆ ಕಾಂಗ್ರೆಸ್ ಆಡಳಿತದ ತಪ್ಪು ನೀತಿಗಳಿಂದ ಉಲ್ಬಣಿಸಿದ ಪಂಜಾಬ್ ಸಮಸ್ಯೆ ರಾಷ್ಟ್ರೀಯ ರಂಗ ಸರಕಾರ ಬಂದ ಮೇಲೂ ಇತ್ಯರ್ಥದ ಹಾದಿ ಕಂಡಿಲ್ಲ. ಅನೇಕ ಕ್ರಮಗಳನ್ನು ಕೈಗೊಂಡರೂ ವಿಫಲವಾಗಿ ಪರಿಸ್ಥಿತಿ ಇನ್ನೂ ಕಳವಳಕಾರಿಯಾಗಿಯೇ ಇದೆ. ಅಷ್ಟು ಮಾತ್ರವಲ್ಲದೆ ಅಮೇರಿಕದ ರಾಯಭಾರಿ ವಿಲಿಯಂ ಕ್ಲರ್ಕ್ ಇತ್ತೀಚೆಗೆ ಪಂಜಾಬ್‌ಗೆ ಭೇಟಿ ನೀಡಿದಾಗ ಪ್ರತ್ಯೇಕತಾವಾದಿ ಅಖಿಲ ಭಾರತ ಸಿಖ್ ವಿದ್ಯಾರ್ಥಿ ಫೆಡರೇಷನ್‌ನಿಂದ ಮನವಿಯೊಂದನ್ನು ಸ್ವೀಕರಿಸಿದರು. ಪರಿಸ್ಥಿತಿಯಲ್ಲಿ ಇನ್ನೂ ಕಳವಳಕಾರಿಯಾದ ಅಂಶವೆಂದರೆ ಸಿಮ್ರಾನ್-ಜಿತ್ ಸಿಂಗ್ ಮಾನ್ ನೇತೃತ್ವದ ಅಕಾಲಿದಳ ಕ್ಲರ್ಕ್‌ಗ್ ಸಲ್ಲಿಸಿದ್ದ ರಹಸ್ಯ ಮನವಿ ಪತ್ರ.(ಸಿಪಿಐ(ಎಂ) ಪಂಜಾಬ್ ಘಟಕ ಬೆಳಕಿಗೆ ತಂದ ಈ ಮನವಿ ಪತ್ರ)ಅಕಾಲಿದಳದ, ವಿಶೇಷವಾಗಿ ಮಾನ್ ಬಣದ ದೇಶದ್ರೋಹಿ ನಿಲುವನ್ನು ಬಯಲುಗೊಳಿಸಿದೆ.

ಭಯೋತ್ಪಾದಕರಿಗೆ ಪಾಕಿಸ್ತಾನದಿಂದ ನೆರವು ಬರುತ್ತಿರುವುದು ನಿಂತಿಲ್ಲ. ತರಬೇತಿ ಶಿಬಿರಗಳಲ್ಲದೆ ಎರಡು ಬಣಗಳ ಪಂಥೀಯ ಸಮಿತಿಗಳೂ ಅಲ್ಲಿಂದ ಕಾರ್ಯಾಚರಿಸುತ್ತಿವೆ. ಈ ಎಲ್ಲಾ ಹಿನ್ನೆಲೆಯಲ್ಲಿ ಸದ್ಯವೇ ಪಂಜಾಬ್ ವಿಧಾನಸಭೆಗೆ ಚುನಾವಣೆ ನಡೆಸುವುದೆಂದರೆ ರಾಜ್ಯವನ್ನು ಅಧಿಕೃತವಾಗಿ ಭಯೋತ್ಪಾದಕರ, ತನ್ಮೂಲಕ ಸಾಮ್ರಾಜ್ಯಶಾಹಿಗಳ ಕೃಪಾಕಟಾಕ್ಷಕ್ಕೆ ಒಳಪಡಿಸಿದಂತೆಯೇ. ಆದ್ದರಿಂದ ಅಲ್ಲಿ ವಾತಾವರಣ ತಿಳಿಗೊಳ್ಳದೆ ಚುನಾವಣೆ ನಡೆಸಬಾರದೆಂದು ಬಹುತೇಕ ಪಕ್ಷಗಳು ಹೇಳಿದ್ದವು.

ದೆಹಲಿಯಲ್ಲಿ ವ್ಯಾಪಕ ಕೋಮುವಾದ ವಿರೋಧಿ ಪ್ರಚಾರ

ಕೋಮುವಾದದ ವಿರುದ್ಧವಾಗಿ ಮತ್ತು ಮಿಾಸಲಾತಿಗೆ ಸಂಬಂಧಿಸಿ ಜನರಿಗೆ ತಿಳುವಳಿಕೆ ಕೊಡಲಿಕ್ಕಾಗಿ ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಸೆಪ್ಟೆಂಬರ್ 11 ರಿಂದ 30 ರವರೆಗೆ ದೇಶದ ರಾಜಧಾನಿಯ ವಿವಿಧ ಭಾಗಗಳಲ್ಲಿ ಪ್ರಚಾರ ಸಭೆಗಳನ್ನು ನಡೆಸಿತು. ಎರಡು ಲಕ್ಷ ಕರಪತ್ರಗಳನ್ನು ವಿತರಿಸಲಾಯಿತು.

ಮಧ್ಯಪ್ರದೇಶದಲ್ಲಿ.....

ಈ ರಾಜ್ಯ ಮಿಾಸಲಾತಿ ವಿರೋಧಿ ಚಳವಳಿಯ ಕಾವನ್ನು ಹೆಚ್ಚು ಕಂಡ ಪ್ರದೇಶಗಳಲ್ಲಿ ಒಂದಾಗಿದೆ. ಅಲ್ಲದೆ ಇಲ್ಲಿನ ಸರಕಾರದ ನೇರ ಕೋಮುವಾದಿ ನೀತಿಯಿಂದಾಗಿ ಕೋಮು ಸೌಹಾರ್ದತೆಯ ವಾತಾವರಣವೂ ಕೆಟ್ಟಿದೆ. ಇಂಥ ಪರಿಸ್ಥಿತಿಯಲ್ಲೂ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಪರಿಸ್ಥಿತಿಯನ್ನು ಸಹಜಗೊಳಿಸಲು ಯತ್ನಿಸುತ್ತಿದೆ.

ಆ ನಿಟ್ಟಿನಲ್ಲಿ ವಿಶೇಷವಾದ ಒಂದು ಕಾರ್ಯಕ್ರಮ ಸೆ.12 ರಂದು ರಾಜಧಾನಿ ನಗರ ಭೂಪಾಲ್‌ನಲ್ಲಿ ನಡೆಯಿತು. ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ರಾಜ್ಯ ಸಮಿತಿಗಳ ಕರೆಯ ಮೇರೆಗೆ ನಡೆದ ರಾಲಿಯಲ್ಲಿ 16 ಜಿಲ್ಲೆಗಳ ಸಾವಿರಾರು ಯುವಜನರು ಪಾಲ್ಗೊಂಡಿದ್ದರು. ಶಿಸ್ತುಬದ್ಧವಾದ ಮೆರವಣಿಗೆ ನಗರದ ಜನರ ಮನಸ್ಸನ್ನು ಆಕರ್ಷಿಸಿತ್ತು.

ಬಿಹಾರದಲ್ಲಿ ಕೋಮುವಾದ ವಿರೋಧಿ ಚಳವಳಿಗೆ ಸನ್ನದ್ಧತೆ

ಕೋಮುವಾದದ ವಿರುದ್ಧ ಜನರನ್ನು ಹೋರಾಟಕ್ಕಿಳಿಸುವ ಬಗ್ಗೆ ಉತ್ತರ ಪ್ರದೇಶದ ಎಡ-ಪ್ರಜಾಸತ್ತಾತ್ಮಕ ಪಕ್ಷಗಳು ಉತ್ತಮ ಮಾದರಿ ಹಾಕಿಕೊಟ್ಟಿವೆ. ಅದರಿಂದ ಪ್ರಭಾವಿತವಾಗಿರುವ ಬಿಹಾರದ ಜನತಾದಳ, ಸಿಪಿಐ, ಸಿಪಿಐ(ಎಂ), ಐಪಿಎಫ್, ಆರ್‌ಎಸ್‌ಪಿ,ಎಂಸಿಪಿಐ, ಎಂಸಿಸಿ, ಎಸ್‌ಯುಸಿಐ ಮತ್ತು ಫಾರ್ವರ್ಡ್ ಬ್ಲಾಕ್‌ಗಳೂ ಅದೇ ರೀತಿಯ ಕಾರ್ಯಕ್ರಮಕ್ಕೆ ಸಜ್ಜಾಗಿವೆ. ಪಾಟ್ನಾದಲ್ಲಿ ರೀತಿಯ ಸಭೆ ಸೇರಿದ್ದ ಈ ಪಕ್ಷಗಳ ಮುಖಂಡರು ರಾಜ್ಯಾದ್ಯಂತ ಅ.2 ರಿಂದ ಸಂಯುಕ್ತವಾಗಿ ಕೋಮುವಾದದ ವಿರುದ್ಧ ಚಳವಳಿ ನಡೆಸಲು ನಿರ್ಧರಿಸಿವೆ. ಅಕ್ಟೋಬರ್ 22 ರಂದು ಪಾಟ್ನಾದಲ್ಲಿ ರಾಜ್ಯ ಮಟ್ಟದ ಬೃಹತ್ ರಾಲಿ ನಡೆಸಲಾಗುವುದು.

ಸಮುದಾಯದ ದಶಮಾನೋತ್ಸವ

ಕೆ.ಜಿ.ಎಫ್‌ನ ಬಿಇಎಂಎಲ್ ಸಮುದಾಯದ ದಶಮಾನೋತ್ಸವವು ತಾರೀಕು 26-9-90 ರಂದು ಕೆಜಿಎಫ್ ನಲ್ಲಿ ನಡೆಯಿತು. ಬಿಇಎಂಎಲ್‌ನ ಸೀನಿಯರ್ ಮ್ಯಾನೇಜರ್‌ರಾದ ಶ್ರೀಯುತ ನಾಗರಾಜಯ್ಯನವರು ಅವರು ಉದ್ಘಾಟನೆ ಮಾಡಿದರು. ಈ ಸಮಾರಂಭದಲ್ಲಿ ಮಾತನಾಡಿದ ಜಿ.ಆರ್.ತಿಪ್ಪೇಸ್ವಾಮಿ, ಉಪನ್ಯಾಸಕರು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯವರು ಸಮುದಾಯದಂತಹ ಸಾಂಸ್ಕೃತಿಕ ಸಂಘಟನೆಗಳ ಅವಶ್ಯಕತೆಗಳನ್ನು ವಿವರಿಸಿ , ಜನರಲ್ಲಿ ಜಾಗೃತಿಯನ್ನು ಮೂಡಿಸುವಲ್ಲಿ ಅದು ವಹಿಸುತ್ತಿರುವ ಪಾತ್ರವನ್ನು ವಿವರಿಸಿದರು. ಶ್ರೀಯುತ ಗೋಪಾಲ್‌ರವರು ಉದ್ಘಾಟನಾ ಬಾಷಣ ಮಾಡುತ್ತಾ ಸಮುದಾಯದ ನಾಟಕಗಳ ಪರಿಣಾಮಗಳನ್ನು ವಿವರಿಸಿ, ತಮ್ಮ ಅನುಭವವನ್ನು ವಿವರಿಸಿದರು. ಶ್ರೀ ಭೂಮಿಗೌಡ , ಉಪನ್ಯಾಸಕರು ಹಾಗೂ ರಾಬರ್ಟ್‌ಸನ್ ಪೇಟೆಯ ಸಮುದಾಯದ ಅಧ್ಯಕ್ಷರು ಮಾತನಾಡಿ ಇಂದಿನ ನಮ್ಮ ದೇಶದ ವಿಚ್ಛಿದ್ರಕಾರಿ,ಕೋಮುವಾದಿ ಶಕ್ತಿಗಳನ್ನು ಮುರಿಯಲು ಸಮುದಾಯದಂತಹ ಸಂಘಟನೆಗೆ ಜನತೆ ಬೆಂಬಲ ನೀಡಬೇಕೆಂದು ವಿನಂತಿಸಿದರು.

ಸಮುದಾಯ ರಾಜ್ಯ ಸಮಿತಿಯ ಜಂಟಿ ಕಾರ್ಯದರ್ಶಿ ಕಾಂ.ಅಚ್ಯುತರವರು ಮಾತನಾಡಿ ಸಮುದಾಯ 15 ವರ್ಷಗಳ ಸಾಧನೆ ಹಾಗೂ ಅದು ಜನರ ಸಮಸ್ಯೆಗಳಿಗ ಹೇಗೆ ಸ್ಪಂದಿಸಿದೆ ಎನ್ನುವುದನ್ನು ವಿವರಿಸಿದರು. ಅಧ್ಯಕ್ಷರು ಮಾತನಾಡುತ್ತಾ ಸಮುದಾಯವು ಇಂತಹ ಜನಪರ ಕಾರ್ಯಕ್ರಮಗಳನ್ನು ಹೆಚ್ಚು ಮಾಡಲಿ ಎಂದು ಹಾರೈಸಿದರು. ನಂತರ ಬಿಇಎಂಎಲ್ ಸಮುದಾಯದ ಸದಸ್ಯರಿಂದ ಸಫ್ದರ್ ಹಶ್ಮಿ ರಚಿಸಿದ 'ನಂದನವನ ದಹನ' ಎಂಬ ಬೀದಿ ನಾಟಕವನ್ನು ಶ್ರೀ ಅಶೋಕ್ ಕುಮಾರ್‌ರವರ ನಿರ್ದೇಶನದಲ್ಲಿ ಪ್ರದರ್ಶಿಸಲಾಯಿತು. ಅದೇ ಸಭಾಂಗಣದಲ್ಲಿ ಮದುರೈ ಬಾಲನ್ ರಚಿಸಿದ 'ಮುರುಗವಿಜಯಂ' ತಮಿಳು ನಾಟಕವನ್ನು ಶ್ರೀ ಜಯಕುಮಾರ್‌ರವರ ನಿರ್ದೇಶನದಲ್ಲಿ ನಟಿಸಲಾಯಿತು.

ಸಭೆಯ ಮೊದಲು ಸಮುದಾಯದ ಕಾರ್ಯದರ್ಶಿ ಶ್ರೀ ಚೊಕ್ಕಲಿಂಗಂ ವರು ಸ್ವಾಗತಿಸಿ, ಕೊನೆಯಲ್ಲಿ ಸಮುದಾಯ ಘಟಕದ ಅಧ್ಯಕ್ಷ ಶ್ರೀ ಸುಧಾಕರ್ ಉಲ್ಲಾಳ್ ವಂದನಾರ್ಪಣೆ ಮಾಡಿದರು.

ದೇಶದೊಳಗೆ

ಅಂತೂ ಈಗ ಎಲ್ಲಾ ಅನಿಶ್ಚಿತತೆ ತೊಲಗಿ ರಾಷ್ಟ್ರಪತಿ ಆಡಳಿತ ವಿಸ್ತರಣೆಯಾಗಿದೆ. ನವೆಂಬರ್ 11ರಿಂದ ಇನ್ನೂ ಆರು ತಿಂಗಳು ಜಾರಿಯಲ್ಲಿರುತ್ತದೆ. ಆದರೆ, ಅಲ್ಲಿಂದ ಮುಂದೇನು?

ಅಷ್ಟರೊಳಗೆ ಸೂಕ್ತವಾದ ವಾತಾವರಣ ಉಂಟಾಗುವಂತೆ ಮಾಡಿ ಪಂಜಾಬ್ ಜನತೆ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ, ಆ ಮೂಲಕ ರಾಷ್ಟ್ರೀಯ ಮುಖ್ಯವಾಹಿನಿಯಲ್ಲಿ ಸೇರುವಂತೆ ಮಾಡಬೇಕು. ಪಂಜಾಬ್‌ನ ಶೇಕಡಾ 95 ಕ್ಕೂ ಹೆಚ್ಚು ಜನರು ಭಯೋತ್ಪಾದಕರಿಗೆ, ಪ್ರತ್ಯೇಕತಾವಾದಕ್ಕೆ ವಿರೋಧವಿದ್ದಾರೆನ್ನುವುದು ಗಮನದಲ್ಲಿಟ್ಟುಕೊಳ್ಳಬೇಕು.

ವಾತಾವರಣ ನಿರ್ಮಾಣ ತನ್ನಿಂತಾನೇ ಆಗದು. ಸಮಸ್ಯೆ ಇತ್ಯರ್ಥದಲ್ಲಿ ಪ್ರಮುಖ ಪಾತ್ರ ವಹಿಸಬಹುದಾದ ರಾಜೀವ್-ಲೋಂಗೋವಾಲ್ ಒಪ್ಪಂದವನ್ನು ಜಾರಿಗೊಳಿಸಬೇಕು. 1984ರ ದೆಹಲಿ ಗಲಭೆಗಳ ತಪ್ಪಿತಸ್ಥರನ್ನು ಶಿಕ್ಷಿಸಬೇಕು. ಇನ್ನೂ ಇಂಥ ಹಲವಾರು ಕ್ರಮಗಳಿಂದ ಶಾಂತ ವಾತಾವರಣ ನೆಲಸಿ ಚುನಾವಣೆ ನಡೆಯಲು ಅನುಕೂಲವಾಗಬಹುದು.

ಮಗುವನ್ನು ಆಹುತಿಗೈದ ಭಯೋತ್ಪಾದಕರು

ಸೆಪ್ಟೆಂಬರ್ ಕೊನೆ- ಅಕ್ಟೋಬರ್ ಮೊದ-
ಲವಾರದಲ್ಲಿ ಪಂಜಾಬ್‌ನಲ್ಲಿ ಭಯೋತ್ಪಾದಕರ ಗುಂಡುಗಳಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಬಲಿಯಾಗಿದ್ದಾರೆ.

ಸೆ. 27 ರಂದು ಸಿ.ಐ.ಟಿ.ಯು ರಾಜ್ಯ ಸಮಿತಿ ಸದಸ್ಯ ಸಾಧುಸಿಂಗ್ ಹುತಾತ್ಮರಾದರು. 38 ವರ್ಷದವರಾಗಿದ್ದ ಅವರು ಸಿ.ಪಿ.ಐ(ಎಂ) ಚಂಡೀಗಢ ಜಿಲ್ಲಾ ಸಮಿತಿ ಸದಸ್ಯರೂ ಆಗಿದ್ದರು. ಅದೇ ದಿನ ಅಮೃತಸರ ಜಿಲ್ಲೆಯ ಮಹಾವಾ ಗ್ರಾಮದಲ್ಲಿ ಸಿಪಿಐ(ಎಂ)ಸದಸ್ಯ ಚರಣಸಿಂಗ್‌ರ ಮನೆ ಮೇಲೆ ಭಯೋತ್ಪಾದಕರಿಂದ ಗುಂಡು, ರಾಕೆಟ್, ಬಾಂಬ್ ಧಾಳಿ. ಈ ಕೃತ್ಯದಲ್ಲಿ ಚರಣ್‌ಸಿಂಗ್ ರ ಆರು ವರ್ಷದ ಮೊಮ್ಮಗ ಅಸುನೀಗಿದ.

ಖೇತ್ ಮಜ್ದೂರ್ ಯೂನಿಯನ್ ನಾಯಕ ವಿಜಯ ಕುಮಾರ್ 'ಗೆರಿಲ್ಲಾ' ಸೆ. 29 ರಂದು ಭಯೋತ್ಪಾದಕರಿಂದ ಬಲಿಯಾದರು. ಅವರ ಜತೆ ಇನ್ನೊಬ್ಬ ಸಂಗಾತಿ ಸರ್ವಾನ್ ಸಿಂಗ್ ಬಿಂಜಾಲ್ ಕೂಡ ಪ್ರಾಣ ತೆತ್ತರು.

'ಕೋಮುವಾದ ಯಾತ್ರೆ'

ಬಿ.ಜೆ.ಪಿ. ಅಧ್ಯಕ್ಷ ಎಲ್.ಕೆ. ಅಧ್ವಾನಿ ಅವರು ಆರಂಭಿಸಿರುವ ರಥಯಾತ್ರೆ ಅದರೊಂದಿಗೆ ನಡೆಯುತ್ತಿರುವ ರಾಮಜ್ಯೋತಿ ಯಾತ್ರೆ ಇತ್ಯಾದಿಗಳು ಕೋಮುವಾದ ಹರಡುವ ಯಾತ್ರೆಯಾಗಿದೆ. ಕರ್ನಾಟಕದಲ್ಲಿನ ಘಟನೆಗಳು ಅದಕ್ಕೆ ಹಿಡಿದ ಕನ್ನಡಿಯಾಗಿದೆ. ಸುಮಾರು 50 ಜನರು ಕರ್ನಾಟಕದಲ್ಲಿ ಸಾವಪ್ಪಿದ್ದಾರೆ.

ರಥಯಾತ್ರೆಯನ್ನು ನಿಲ್ಲಿಸಬೇಕೆಂಬ ಹಲವಾರು ಧಾರ್ಮಿಕ ಹಾಗೂ ರಾಜಕೀಯ ಮುಖಂಡರ ಮನವಿಗೆ ಅಧ್ವಾನಿ ಕಿವಿಗಳು ಮುಚ್ಚಿಕೊಂಡಿವೆ.

ಗುಜರಾತ್ ಮತ್ತು ಉತ್ತರಪ್ರದೇಶದ ಹಲವಾರು ಕಡೆಗಳಲ್ಲೂ ಕೋಮುವಾದದ ವಿಷ ಸರ್ಪ ಹೆಡೆಯೆತ್ತಿ ನಿಂತಿದೆ. ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತ, ಮಾನವೀಯ ಮೌಲ್ಯದಲ್ಲಿ ನಂಬಿಕೆ ಉಳ್ಳ ಎಲ್ಲರೂ ಒಂದಾಗಿ ಈ ಸರ್ಪವನ್ನು ಹೊಸಕಿ ಹಾಕುವುದು ಕಾಲದ ಕರೆಯಾಗಿದೆ.

ಈ ಸಂದರ್ಭದಲ್ಲಿ, ಕೋಮುಗಲಭೆಗಳಿಗೆ ಕಳವಳ ವ್ಯಕ್ತಪಡಿಸಿ ಪ್ರಧಾನಿ ವಿ.ಪಿ. ಸಿಂಗ್ ನೀಡಿರುವ ಹೇಳಿಕೆಯಲ್ಲಿ ಅಡಕವಾಗಿರುವ ಕೆಳಗಿನ ಮಾತುಗಳನ್ನು ಉಲ್ಲೇಖಿಸುವುದು ಇಲ್ಲಿ ಸೂಕ್ತ.

'ಬೇರೊಂದು ಹೆಸರಿನಲ್ಲಿ ಕರೆಯಲಾಗುವ ಮಾತ್ರಕ್ಕೆ ಮನುಷ್ಯರು ಮಾನವತೆಯನ್ನು ಕಳೆದುಕೊಂಡು ತಮ್ಮ ಸಹಜೀವಿಗಳ ವಿರುದ್ಧ ದುಷ್ಕೃತ್ಯ ನಡೆಸುತ್ತಿದ್ದಾರೆ. ನಾಶವಾದ ಮನೆಗಳನ್ನು ಮತ್ತೆ ಕಟ್ಟಬಹುದು. ಆಸ್ತಿಯನ್ನು ಮರು ಸಂಪಾದಿಸಬಹುದು. ಸಾವಿನಿಂದಾದ ಗಾಯ ಕಾಲಾಂತರದಲ್ಲಿ ಮಾಯಬಹುದು. ಆದರೆ ಈ ಗಲಭೆಗಳು ನಾಶಪಡಿಸಿರುವಂಥ, ಜನರನ್ನು ಪರಸ್ಪರ ಬೆಸೆಯುವ ಮೈತ್ರಿ, ವಿಶ್ವಾಸ ಮತ್ತು ಪರಸ್ಪರ ಗೌರವವನ್ನು ಮತ್ತೆ ಮರಳಿಸಲು ಬಹು ದೀರ್ಘ ಸಮಯ ಹಿಡಿಯುತ್ತದೆ'

ಕಮಲಾಪತಿ ತ್ರಿಪಾಠಿ ನಿಧನ

ಭಾರತದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಹಳೆಯ ತಲೆಮಾರಿನ ಹಿರಿಯರಲ್ಲೊಬ್ಬರಾದ ಕಾಂಗ್ರೆಸ್ ನಾಯಕ ಕಮಲಾಪತಿ ತ್ರಿಪಾಠಿ ಅಕ್ಟೋಬರ್ 7 ರಂದು ವಾರಣಾಸಿಯಲ್ಲಿ ನಿಧನರಾದರು.

ವಯೋವೃದ್ಧರಾಗಿದ್ದ ತ್ರಿಪಾಠಿ ಅಸೌಖ್ಯದಿಂದ ಬಳಲುತ್ತಿದ್ದರು.

ಅ.8ರಂದು ಸಕಲ ಸರಕಾರಿ ಗೌರವಗಳೊಡನೆ ಅವರ ಪಾರ್ಥಿವ ಶರೀರದ ಅಂತ್ಯ ಸಂಸ್ಕಾರ ವಾರಣಾಸಿಯಲ್ಲಿ ನಡೆಯಿತು.

ಇತ್ತೀಚೆಗೆ ಕಾಂಗ್ರೆಸ್(ಐ)ನ, ಅದರ ನಾಯಕರ ಸರ್ವಾಧಿಕಾರಿ, ಪ್ರಜಾಪ್ರಭುತ್ವ ವಿರೋಧಿ ನೀತಿಗಳನ್ನು ಟೀಕಿಸುತ್ತಿದ್ದ ಕಮಲಾಪತಿ ತ್ರಿಪಾಠಿ ಆಗಾಗ ಸ್ವಪಕ್ಷೀಯರಿಗೆ ಶಾಕ್ ಟ್ರೀಟ್‌ಮೆಂಟ್ ಕೊಡುತ್ತಿದ್ದರು.

ಸುದ್ದಿ ಸಂಗ್ರಹ

ದಿಲ್ಲಿ ವಿ.ವಿ. ಶಿಕ್ಷಕರ ಸಂಘಕ್ಕೆ ರಾಜಿನಾಮೆ

ರಾಜಧಾನಿಯಲ್ಲಿ ನಡೆಯುತ್ತಿರುವ ಮಿಾಸಲಾತಿ ವಿರೋಧಿ ಚಳವಳಿಯಲ್ಲಿ ಸಂಘವು ಸಕ್ರಿಯವಾಗಿ ಭಾಗವಹಿಸುವಂತೆ ಕಾಂಗ್ರೆಸ್(ಐ) ಮತ್ತು ಬಿ.ಜೆ.ಪಿ. ಪರ ಪದಾಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಇದು ಇಡೀ ಶಿಕ್ಷಕ ಸಮುದಾಯವನ್ನು ವಿಭಜಿಸುವ ಮತ್ತು ಸಂಘವನ್ನು ದುರ್ಬಲಗೊಳಿಸುವ ಕ್ರಮವಾಗಿದೆ ಎಂದು ದಿಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಕರ ಸಂಘದ (ಡಿ.ಯು.ಟಿ.ಎ.) ಅಧ್ಯಕ್ಷ ಎಂ.ಎಂ.ಪಿ.ಸಿಂಗ್ ಬಲವಾಗಿ ಖಂಡಿಸಿ ತಮ್ಮ ಸ್ಥಾನಕ್ಕೆ ಸೆಪ್ಟೆಂಬರ್ 20 ರಂದು ರಾಜಿನಾಮೆ ನೀಡಿದ್ದಾರೆ.

ಡಿ.ಯು.ಟಿ.ಎ. ಕಾರ್ಯಕಾರಿ ಸಮಿತಿಯಲ್ಲಿ ಕಾಂಗ್ರೆಸ್(ಐ) ಮತ್ತು ಬಿಜೆಪಿಯವರೇ ಹೆಚ್ಚಿದ್ದು ನಾಲ್ವರು ಪದಾಧಿಕಾರಿಗಳು ಈ ಎರಡು ಪಕ್ಷಗಳಿಗೆ ಸೇರಿದವರಾಗಿದ್ದಾರೆ. ಸೆಪ್ಟೆಂಬರ್ 11 ರಂದು ನಡೆದ ಡಿಯುಟಿಎ ಸರ್ವಸದಸ್ಯರ ಸಭೆಯನ್ನು ಕಾಂಗ್- ಬಿಜೆಪಿ ಕೂಟ ಹಾಳುಗೆಡವಿತು. ಮಿಾಸಲಾತಿಗೆ ಸಂಬಂಧಿಸಿ ಒಂದು ಸರಿಯಾದ ನಿರ್ಣಯ ತೆಗೆದುಕೊಳ್ಳಬೇಕೇ ಬೇಡವೇ ಎಂಬುದನ್ನು ನಿರ್ಧರಿಸಲಾಗದ ಸ್ಥಿತಿ ನಿರ್ಮಿಸಿತು. ನೂರಾರು ಸದಸ್ಯರು ಚರ್ಚೆಯಲ್ಲಿ ಪಾಲ್ಗೊಳ್ಳಲು ಉತ್ಸುಕರಾಗಿದ್ದರು. ಅನಂತರ ಈ ಕೂಟ, ಮಂಡಲ್ ವರದಿಯ ಜಾರಿಯನ್ನು ತಡೆಹಿಡಿಯಲು ಡಿ.ಯು.ಟಿ.ಎ. ಕರೆ ನೀಡಿದೆ ಎಂಬ ಪ್ರಚಾರ ಮಾಡತೊಡಗಿತು. ಇದಕ್ಕೆ ಕಾರ್ಯಕಾರಿ ಸಮಿತಿಯ ಒಪ್ಪಿಗೆ ಪಡೆಯಲು ಯತ್ನಿಸಿತು. ಅಷ್ಟು ಮಾತ್ರವಲ್ಲದೆ ಮಂಡಲ್ ವಿರೋಧಿ ಚಳವಳಿಯನ್ನು ಬೆಂಬಲಿಸಲು ಸಂಘದ ಹೆಸರು ಮತ್ತು ಪ್ರತಿಷ್ಠೆಯನ್ನು ಬಳಸಲೂ ಪ್ರಯತ್ನಿಸಲಾಯಿತು.

ಇದನ್ನೆಲ್ಲಾ ಕಣ್ಮುಚ್ಚಿನೋಡುವುದಕ್ಕೆ ಬದಲಾಗಿ ಅಧ್ಯಕ್ಷ ಎಂ.ಎಂ.ಪಿ.ಸಿಂಗ್ ರಾಜಿನಾಮೆ ಸಲ್ಲಿಸಿದರು.

ಪಾಟ್ನಾದ ಬೀದಿಗಳಲ್ಲಿ ಸರಕಾರಿ ನೌಕರರ ದಂಡು

ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಬಿಹಾರದ 42 ಜಿಲ್ಲೆಗಳಿಂದ ಆಗಮಿಸಿದ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ನೌಕರರು ಸೆ. 11 ರಂದು ರಾಜ್ಯದ ಮುಖ್ಯ ಪಟ್ಟಣದಲ್ಲಿ ಮೆರವಣಿಗೆ ನಡೆಸಿದರು.

ಬಿಹಾರ ರಾಜ್ಯ ನಾನ್ ಗೆಜೆಟೆಡ್ ನೌಕರರ ಫೆಡರೇಶನ್ ಈ ಹೋರಾಟಕ್ಕೆ ಕರೆ ನೀಡಿತ್ತು.

ಭಾರತ ಜ್ಞಾನ ವಿಜ್ಞಾನ ಜಾಥಾ ಆರಂಭ

ಅನಕ್ಷರತೆಯ ಮಡುವಾದ ಭಾರತದಲ್ಲಿ ಸಾಕ್ಷರತೆಯ ಅರಿವು ಮೂಡಿಸುವತ್ತ ರೂಪುಗೊಂಡಿರುವ ಭಾರತ ವಿಜ್ಞಾನ ಜಾಥಾ ಒಂದು ಅಪೂರ್ವ ಕಾರ್ಯಕ್ರಮ.

ಅಖಿಲ ಭಾರತ ಜನತಾ ವಿಜ್ಞಾನ ಜಾಲ ಕೇಂದ್ರ ಸರಕಾರದ ಸಹಯೋಗದೊಂದಿಗೆ ಇದನ್ನು ರೂಪಿಸಿದೆ. ಹಾಡು, ಕುಣಿತ, ಚಿತ್ರ, ಭಿತ್ತಿ ಪತ್ರ ಪ್ರದರ್ಶನಗಳ ಮೂಲಕ ಅಕ್ಷರ ಕಲಿಕೆಗೆ ಪ್ರೇರೇಪಣೆ ಕೊಡುವ ಕಲಾ ಜಾಥಾ ಅಕ್ಟೋಬರ್ ಎರಡರಿಂದ ಆರಂಭಗೊಂಡಿದೆ. ನವೆಂಬರ್ 14 ರವರೆಗೆ ನಡೆಯಲಿದೆ.

ದೇಶದ ಪ್ರತಿ ಜಿಲ್ಲೆಯಲ್ಲಿ ಒಂದು ಜಾಥಾ ತಂಡ ಸರಾಸರಿ 100ರಿಂದ 120 ಕೇಂದ್ರಗಳಲ್ಲಿ ಪ್ರದರ್ಶನ ನೀಡಲಿದೆ

ಬಜೆಟ್ ವಿವಾದ: ಅಮೇರಿಕನ್ ಸರಕಾರ ಸ್ತಬ್ಧ

ಸಧ್ಯದಲ್ಲೇ ಅಧ್ಯಕ್ಷ ಬುಶ್ ಆಡಳಿತ ಮತ್ತು ಅಮೇರಿಕನ್ ಕಾಂಗ್ರೆಸ್ (ಪಾರ್ಲಿಮೆಂಟ್) ನಡುವೆ ಮಾತುಕತೆ ನಡೆದು ವಿವಾದ ಪರಿಹಾರವಾಗದಿದ್ದರೆ ಮುಂದಿನ ದಿನಗಳಲ್ಲಿ ಅಮೇರಿಕನ್ ಸರಕಾರ ಖರ್ಚು ಮಾಡಲು ಹಣದ ಅಭಾವದಿಂದ ಸಂಪೂರ್ಣ ಸ್ತಬ್ಧವಾಗುವುದು. ಲಕ್ಷಾಂತರ ಸರಕಾರಿ ಉದ್ಯೋಗಿಗಳು ಲೇ-ಆಫ್ ಎದುರಿಸಬೇಕಾದೀತು. ಸಾಮಾಜಿಕ ಭದ್ರತೆ, ಪೆನ್‌ಷನ್ ಮುಂತಾದ ರೂಪದಲ್ಲಿ ಸರಕಾರದಿಂದ ಹಣ ಪಡೆಯುವ ಲಕ್ಷಾಂತರ ಮಂದಿ ಬೀದಿಪಾಲಾಗಬೇಕಾದೀತು. ಯಾಕೆಂದರೆ ಕಾಂಗ್ರೆಸ್ ಮಂಜೂರು ಮಾಡಿರುವ ಬಜೆಟ್ ಬದಲಾವಣೆಗಳನ್ನು ಅಧ್ಯಕ್ಷ ಬುಶ್ ಒಪ್ಪಲು ತಯಾರಿಲ್ಲ. ಅಧ್ಯಕ್ಷ ಬುಶ್ ಮಂಡಿಸಿರುವ ಬಜೆಟ್‌ಗೆ, ಬದಲಾವಣೆ ಇಲ್ಲದೆ ಒಪ್ಪಲು ಕಾಂಗ್ರೆಸ್ ನಿರಾಕರಿಸಿದೆ. ಕಡೆಯ ಗಳಿಗೆಯಲ್ಲಿ ಕಾಂಗ್ರೆಸ್ ಈ ವಿವಾದ ಅಂತ್ಯವಾಗುವವರೆಗೆ ಸರಕಾರಿ ಹಣ ಖರ್ಚು ಮಾಡಲು ಸರಕಾರಕ್ಕೆ ಅಧಿಕಾರ ಕೊಡುವ ಪ್ರಸ್ತಾವನೆ ಮಂಜೂರು ಮಾಡಿತ್ತು. ಆದರೆ ಅದನ್ನೂ ಒಪ್ಪಲು ಅಧ್ಯಕ್ಷರು ತಯಾರಿಲ್ಲ. ಸಂವಿಧಾನದ ಪ್ರಕಾರ ಅಧ್ಯಕ್ಷರಿಗೆ ಕಾಂಗ್ರೆಸ್ ನಿರ್ಧಾರವನ್ನು ವಿಟೋ ಮಾಡಲು, ಅಥವಾ ಅದಕ್ಕೆ ಒಪ್ಪಿ ಸಹಿ ಹಾಕಲು 10 ದಿನಗಳಿವೆ.

'ನನ್ನ ದೇಶ ರಾತ್ರೋರಾತ್ರಿ ಮಾಯವಾಗಿದೆ'

ಇದು ಕ್ಲಾಸ್ ಫಿಶರ್ ಎಂಬ ಪೂ.ಜರ್ಮನಿಯ ವಿಜ್ಞಾನಿಯ ಅಳಲು ಮಾತ್ರವಲ್ಲ, ಲಕ್ಷಾಂತರ ಪೂ.ಜರ್ಮನ್ ನಾಗರಿಕರು ಅಕ್ಟೋಬರ್ 3ರ ಮಧ್ಯರಾತ್ರಿ ತಮ್ಮ ದೇಶ ರಾತ್ರೋರಾತ್ರಿ ಮಾಯವಾದುದರ ಬಗ್ಗೆ ನಿರಾಶೆ, ಆತಂಕ ವ್ಯಕ್ತ ಪಡಿಸಿದರು. ಪಶ್ಚಿಮ ಜರ್ಮನಿಯ ಆಳುವ ಪಕ್ಷದ ನಾಯಕರು, ಆಳುವ ವಲಯಗಳು ಈ ಆತಂಕವನ್ನು ಮುಳುಗಿಸುವಂತೆ ಭಾರಿ ವಿಜಯೋತ್ಸವಗಳು, ಸಮಾರಂಭಗಳು, ಸಂಗೀತ ಕೂಟಗಳನ್ನು ಏರ್ಪಡಿಸಿದ್ದರು. ಬರ್ಲಿನ್‌ನ ಬ್ರಾಡನ್ ಬರ್ಗ್ ಗೇಟ್(ಈಗ ಇಲ್ಲವಾಗಿರುವ ಪೂರ್ವ ಮತ್ತು ಪಶ್ಚಿಮ ಬರ್ಲಿನ್ ಗಡಿಯಲ್ಲಿದೆ), ರೈಸ್ ತಾಗ್(ಹಿಟ್ಲರ್ ಅಧಿಕಾರಕ್ಕೆ ಬರುವ ಮುಂಚೆ ಸರಕಾರದ ಮುಖ್ಯ ಕಛೇರಿಗಳು ಇದ್ದ ಕಟ್ಟಡ) ಗಳಲ್ಲಿ ಮುಖ್ಯ ಅಧಿಕೃತ ಸಮಾರಂಭಗಳು ನಡೆದವು.

ಎರಡೂ ಜರ್ಮನಿಗಳ ಪಾರ್ಲಿಮೆಂಟುಗಳು ನಿರ್ಧರಿಸಿದಂತೆ ಅಕ್ಟೋಬರ್ 3 ರಂದು ರಾಜಕೀಯ ಐಕ್ಯತೆಯಾಗುವುದು ಎಂದು ನಿರ್ಧರಿಸಲಾಗಿತ್ತು. ಡಿಸೆಂಬರ್‌ನಲ್ಲಿ ಐಕ್ಯ ಜರ್ಮನಿಯ ಪಾರ್ಲಿಮೆಂಟಿಗೆ ಚುನಾವಣೆಗಳು ನಡೆಯುತ್ತವೆ.

ಪಶ್ಚಿಮ ಜರ್ಮನಿಯ ಆಳುವ ವಲಯಗಳಲ್ಲಿ ಸಂತಸ ಮೂಡಿದ್ದರೂ ಸಾಮಾನ್ಯ ಜನರಲ್ಲಿ ಆತಂಕವಿಲ್ಲದಿಲ್ಲ. ಐಕ್ಯತೆಯಿಂದ ಆರ್ಥಿಕದಲ್ಲಿ ಏರುಪೇರು, ಸಾಮಾಜಿಕ ಅಭದ್ರತೆ, ಜೀವನ ಮಟ್ಟದಲ್ಲಿ ಏರಿಳಿತ ಆಗುವ ಸಾಧ್ಯತೆಗಳ ಬಗ್ಗೆ. ಪಶ್ಚಿಮ ಜರ್ಮನಿಯಲ್ಲಂತೂ ಬಾಡಿಗೆ ಏರಿಕೆ, ಕೈಗಾರಿಕೆಗಳ ಮುಚ್ಚುವಿಕೆಯಿಂದ, ನಿರುದ್ಯೋಗ, ಎಲ್ಲಾ ಬೆಲೆಗಳ ಏರಿಕೆ, ಸಾಮಾಜಿಕ ಕಲ್ಯಾಣ ಕ್ರಮಗಳಲ್ಲಿ ಕಡಿತ ಮುಂತಾದುವುಗಳಿಂದ ಜನ ಈಗಾಗಲೇ ಬೇಸತ್ತಿದ್ದಾರೆ. ಐಕ್ಯತೆಯಿಂದ ಸ್ವರ್ಗ ಸಿಗುವುದೆಂಬ ಕನಸು ನುಚ್ಚುನೂರಾಗಿದೆ.

ಐಕ್ಯತೆಯ ನಂತರ, ಈಗಾಗಲೇ ಆರಂಭವಾಗಿರುವ ಕಮ್ಯುನಿಸ್ಟರ ಬೇಟೆ ತೀವ್ರವಾಗುವ ಸಂಭವವಿದೆ. ಈಗಾಗಲೇ ಹಿಂದಿನ ಪೂರ್ವ ಜರ್ಮನಿಯ ಎಲ್ಲಾ ರಾಯಭಾರ ಸಿಬ್ಬಂದಿಗಳನ್ನು ಬರ್ಖಾಸ್ತು ಮಾಡಲಾಗಿದೆ. ಹಾಗೆಯೇ ಪ್ರಮುಖ ಹುದ್ದೆಗಳಲ್ಲಿರುವ ಕಮ್ಯುನಿಸ್ಟ್ ಸದಸ್ಯರಾದ ಆರ್ಥಿಕತಜ್ಞರು, ಇಂಜಿನಿಯರುಗಳು, ಪ್ರೊಫೆಸರುಗಳನ್ನು ಕೆಲಸದಿಂದ ತೆಗೆದು ಹಾಕಲಾಗಿದೆ.

ಆದ್ದರಿಂದ ಪ.ಜರ್ಮನಿಯಲ್ಲಿ ಕೆಲವು, ಪೂರ್ವ ಜರ್ಮನಿಯಲ್ಲಿ ಹಲವು ಭಾರಿ ಪ್ರದರ್ಶನಗಳು ಐಕ್ಯತೆಯ ಹಿಂದಿನ ದಿನಗಳಲ್ಲಿ, ಅಂದೂ ಸಹ ನಡೆಯಿತು. ಪೂರ್ವ ಜರ್ಮನಿಯಲ್ಲಿ ಪ್ರದರ್ಶನಗಳನ್ನು ಸಂಘಟಿಸಿದ್ದು ಈಗ ಪ್ರಜಾತಾಂತ್ರಿಕ ಸಮಾಜವಾದಿ ಪಕ್ಷ ಎಂದು ಕರೆದುಕೊಳ್ಳುವ ಮಾಜಿ ಕಮ್ಯುನಿಸ್ಟ್ ಪಕ್ಷ. ಪ್ರದರ್ಶನ ಐಕ್ಯತೆಯ ವಿರುದ್ಧ ಅಲ್ಲ. ಐಕ್ಯತೆಯ ಷರತ್ತುಗಳ ಮೇಲೆ, ಅನಗತ್ಯ ಅವಸರದಿಂದ ಐಕ್ಯತೆ ನಡೆಯುತ್ತಿದೆ ಎಂದು ಪ್ರದರ್ಶಕಾರರು ಭಾವನೆಯನ್ನು ತೋರ್ಪಡಿಸಿದರು. ಐಕ್ಯತೆಯ ಬಗ್ಗೆ ಜನತೆಗೆ ಪೂರ್ಣ ಭ್ರಮನಿರಸನವಾಗುವ ಮೊದಲು, ಐಕ್ಯತೆ ಸಾಧಿಸಿ ಬಿಡಬೇಕೆಂದು ಅವಸರ ತಡವಾದಷ್ಟೂ ಐಕ್ಯತೆ ಬಗ್ಗೆ ವಿರೋಧ ಬಲವಾಗಬಹುದು ಅಥವಾ ಐಕ್ಯತೆಯ ಶರತ್ತುಗಳು ತಮಗೆ ಅನುಕೂಲವಾಗದಿರಬಹುದು- ಎಂಬುದು ಪ.ಜರ್ಮನಿಯ ಆಳುವ ವಲಯಗಳ ಅವಸರದ ಹಿಂದಿರುವ ಆತಂಕ.

ಐಕ್ಯ ಜರ್ಮನಿ ಪ.ಜರ್ಮನಿಯ ಒಂದೂವರೆ ಪಟ್ಟು ವಿಸ್ತೀರ್ಣ ಹೊಂದಿರುತ್ತದೆ. ಇದು ಫ್ರಾನ್ಸ್‌ನ ವಿಸ್ತೀರ್ಣಕ್ಕಿಂತ ಕಡಿಮೆ, ಇಟಲಿಗಿಂತ ದೊಡ್ಡದು. ಜನಸಂಖ್ಯೆ 7. 87 ಕೋಟಿ. ಐಕ್ಯ ಜರ್ಮನಿ ಆರ್ಥಿಕತೆಯಲ್ಲಿ ಜಗತ್ತಿನ ಮೂರನೇ ದೊಡ್ಡ ಆರ್ಥಿಕತೆ ಆಗುವ ಸಂಭವವಿದೆ. ಯೂರೋಪಿನಲ್ಲಂತೂ ಅದು ಈಗ ಬಲಾಢ್ಯ ದೇಶ. ಯೂರೋಪಿನ ಆರ್ಥಿಕತೆಯ ಮೂರನೆಯ ಒಂದು ಭಾಗ ಜರ್ಮನಿಯದ್ದಾಗುತ್ತದೆ. ಜರ್ಮನಿಯ ಆರ್ಥಿಕತೆ ಯೂರೋಪಿನ ಇತರ ಎರಡು ಬಲಾಢ್ಯ ದೇಶ-ಇಂಗ್ಲೆಡ್ ಮತ್ತು ಫ್ರಾನ್ಸ್-ಗಳಿಗಿಂತಸುಮಾರು ಎರಡು ಪಟ್ಟು. ಈ ಕಾರಣಗಳಿಂದ ಪಶ್ಚಿಮ ಯೂರೋಪಿನ ಇತರ ದೇಶಗಳೂ ಜರ್ಮನ್ ಐಕ್ಯತೆ ಬಗ್ಗೆ ಸ್ವಲ್ಪ ಆತಂಕದಿಂದ ಇವೆ. ಇದಕ್ಕೆ ಈವರೆಗೆ ನಡೆದ ಎರಡೂ ಜಾಗತಿಕ ಯುದ್ಧಗಳು ಜರ್ಮನಿಯಿಂದ ಆರಂಭವಾದದ್ದೂ ಕಾರಣ. ಇದು ಪುನರಾವರ್ತನೆ ಆಗದಂತೆ ಜರ್ಮನ್ ಐಕ್ಯತೆ ಬಗ್ಗೆ ನಡೆದ ಅಂತರರಾಷ್ಟ್ರೀಯ ಒಪ್ಪಂದದಲ್ಲಿ ಜರ್ಮನ್ ರಕ್ಷಣಾ ನೀತಿಗೆ ವಿಧಿಸಿದ ನಿರ್ಬಂಧಗಳು ಕೆಲಸ ಮಾಡುವುದು ಎಂದೂ ಹೇಳಲಾಗಿದೆ.

ಇದು ಏನೇ ಇದ್ದರೂ ಜರ್ಮನ್ ಐಕ್ಯತೆ ಚಾರಿತ್ರಿಕ. ಚರಿತ್ರೆಯ ಒಂದು ಪ್ರಮುಖ ತಿರುವು ಎನ್ನುವುದರಲ್ಲಿ ಸಂಶಯವಿಲ್ಲ. ಜರ್ಮನ್ ಐಕ್ಯತೆ ಸಧ್ಯಕ್ಕೆ ಬಲಪಂಥೀಯ ರಾಜಕೀಯಕ್ಕೆ ಅನುಕೂಲಕರವಾಗಿ ಕಂಡರೂ, ಇತ್ತ ಜರ್ಮನಿಯ ರಾಜಕೀಯ ಬೆಳವಣಿಗೆಯಲ್ಲಿ ಪೂರ್ವ ಜರ್ಮನಿಯಲ್ಲಿ ಆಳವಾಗಿ ಬೇರುಬಿಟ್ಟಿರುವ ಸಮಾಜವಾದದ ಪರಿಕಲ್ಪನೆಗಳು, ಸಂಸ್ಥೆಗಳು ಪರಿಣಾಮ ಬೀರದೆ ಇರಲಿಕ್ಕಿಲ್ಲ. ಇದು ಐಕ್ಯ ಜರ್ಮನ್ ರಾಜಕೀಯದ ಬದಲಾದ ಪರಿಸ್ಥಿತಿಯಲ್ಲಿ ಎಡ ಶಕ್ತಿಗಳು ಯಾವ ರೀತೀ ಕೆಲಸ ಮಾಡುತ್ತವೆ ಎನ್ನುವುದರ ಮೇಲೆ ಹೆಚ್ಚು ಅವಲಂಬಿಸಿದೆ.

'ಯುದ್ಧ ಹಡಗುಗಳನ್ನು ವಾಪಸು ಕರೆಸಿ'

ಈ ಘೋಷಣೆಯ ಸುತ್ತ ಆಸ್ಟ್ರೇಲಿಯಾದಲ್ಲಿ ವ್ಯಾಪಕ ಪ್ರದರ್ಶನಗಳಾಗಿವೆ. ಈ ಪ್ರದರ್ಶನಗಳ ಮುಖ್ಯ ಉದ್ದೇಶ— ಆಸ್ಟ್ರೇಲಿಯ ಕೊಲ್ಲಿ ಬಿಕ್ಕಟ್ಟಿನಲ್ಲಿ ಮಧ್ಯಪ್ರವೇಶ ಮಾಡಲು ಅಮೇರಿಕನ್ ಹೇಳಿಕೆ ಮೇರೆಗೆ ಯುದ್ಧ ಹಡಗು ಮತ್ತಿತರ ಸೇನಾ ಬಲ ಕಳಿಸಿರುವುದನ್ನು ವಿರೋಧಿಸುವುದು. ಇದಕ್ಕಾಗಿ ಜಾಗತಿಕ ಶಾಂತಿ ದಿನ ಸೆಪ್ಟೆಂಬರ್ 1ನ್ನು ಆರಿಸಲಾಗಿತ್ತು. ಹೆಚ್ಚು ಕಡಿಮೆ ಎಲ್ಲಾ ಆಸ್ಟ್ರೇಲಿಯನ್ ನಗರಗಳಲ್ಲಿ ಇಂತಹ ಪ್ರದರ್ಶನಗಳು ನಡೆದವು. 'ಯುದ್ಧ ಹಡಗುಗಳನ್ನು ವಾಪಸು ಕರೆಸಲು ಐಕ್ಯರಂಗ' ಎಂಬ ಸಂಘಟನೆ ಎಲ್ಲಾ ನಗರಗಳಲ್ಲಿ ಈ ಪ್ರದರ್ಶನಗಳನ್ನು ಸಂಘಟಿಸಿತ್ತು. ಈ ವಿಶಾಲ ತಳಹದಿಯ ಸಂಘಟನೆಯಲ್ಲಿ ಶಾಂತಿ ಚಳುವಳಿಗಳು, ಟ್ರೇಡ್ ಯೂನಿಯನ್‌ಗಳು, ಚರ್ಚುಗಳು, ಪರಿಸರವಾದಿಗಳು, ಅರಬ್ ಗುಂಪುಗಳು, ಆಸ್ಟ್ರೇಲಿಯನ್ ಸಮಾಜವಾದಿ ಪಕ್ಷಗಳು ಸೇರಿವೆ. ಇದಲ್ಲದೆ ಆಸ್ಟ್ರೇಲಿಯನ್ ಲೇಬರ್ ಪಕ್ಷ ಮತ್ತು ಡೋಮಾಕ್ರೆಟಿಕ್ ಪಕ್ಷದ ಪಾರ್ಲಿಮೆಂಟ್ ಸದಸ್ಯರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ.

ಅಮೇರಿಕದ ಬಾಲಂಗೋಚಿಯಾಗಿ ಆಸ್ಟ್ರೇಲಿಯಾ ಅರಬ್ ದೇಶಗಳ ವಿರುದ್ಧ ಯುದ್ಧಕ್ಕಿಳಿಯುವುದನ್ನು ಸಂಘಟನೆ ವಿರೋಧಿಸಿದೆ. ಶಾಂತಿಯುತವಾಗಿ ಕೊಲ್ಲಿ ಬಿಕ್ಕಟ್ಟನ್ನು ಬಗೆಹರಿಸುವ ಎಲ್ಲಾ ಸಾಧ್ಯತೆಗಳು ಮುಗಿಯುವ ಮೊದಲೇ ಮಿಲಿಟರಿ ಕ್ರಮ ಸರಿಯಲ್ಲ . ಅಲ್ಲದೆ ಕೊಲ್ಲಿಯಲ್ಲಿ ಅಮೇರಿಕನ್ ಹಿತಾಸಕ್ತಿಗಳನ್ನು ರಕ್ಷಿಸಲು ಆಸ್ಟ್ರೇಲಿಯಾ ಹೋಗಬೇಕಾಗಿಲ್ಲ. ಅಮೇರಿಕ ಮತ್ತಿತರ ಪಾಶ್ಚಿಮಾತ್ಯ ದೇಶಗಳು ಕೊಲ್ಲಿಯ ತೈಲದ ಬೆಲೆ ಮತ್ತು ಪೂರೈಕೆಯ ಮೇಲೆ ಹತೋಟಿ ಇಟ್ಟುಕೊಳ್ಳಲು ಚರಿತ್ರೆಯಲ್ಲಿ ಯಾವತ್ತೂ ಯಾವ ಕ್ರಮ ಕೈಗೊಳ್ಳಲೂ ಹೇಸಿಲ್ಲ. ಇಂದೂ ಹೇಸುವುದಿಲ್ಲ. ಇದರಲ್ಲಿ ಆಸ್ಟ್ರೇಲಿಯಾ ಭಾಗಿಯಾಗಬಾರದು. —ಇದು ಸಂಘಟನೆಯ ನಿಲುವು.

'ಮುಗ್ಧ ಜನತೆಯ ಕೊಲೆಯಲ್ಲಿ ಗೊತ್ತಿದ್ದೂ ಭಾಗವಹಿಸಲು ನಿರಾಕರಿಸುವ ' ಆಸ್ಟ್ರೇಲಿಯನ್ ನೌಕಾ ಸೈನಿಕ ಟೆರ್ರಿಜೋನ್ಸ್ ಯುದ್ಧಕ್ಕೆ ಹೋಗುವುದನ್ನು ನಿರಾಕರಿಸಿರುವುದಕ್ಕೆ ಬೆಂಬಲವಾಗಿಯೂ ಭಾರಿ ಪ್ರಚಾರ ಪ್ರಕ್ಷೋಭೆ ನಡೆದಿದೆ. ಟೆರ್ರಿಜೋನ್ಸ್‌ಗೆ ಯಾವುದೇ ರೀತಿಯ ಶಿಕ್ಷೆ ಕೊಡಬಾರದು ಎಂದು ಭಾರಿ ದೊಡ್ಡ ರೀತಿಯಲ್ಲಿ ಒತ್ತಾಯಿಸಲಾಗುತ್ತಿದೆ.

ಆಕ್ವಿನೋ ವಿರುದ್ಧ ಇನ್ನೊಂದು ಮಿಲಿಟರಿ ದಂಗೆ

ಫಿಲಿಪ್ಪಿನ್ಸ್‌ನ ಅಕ್ವಿನೋ ವಿರುದ್ಧ ಇನ್ನೊಂದು ಮಿಲಿಟರಿ ದಂಗೆ ನಡೆದಿದೆ. ಎರಡು ದಿನಗಳ ಕಾಲ ದಕ್ಷಿಣದ ಮಿಂಟನಾವೋ ದ್ವೀಪಗಳ ಎರಡು ಮಿಲಿಟರಿ ಕ್ಯಾಂಪುಗಳನ್ನು 200 ಸೈನಿಕರು ಮತ್ತು ಅವರ 600 ಸಮರ್ಥಕರು ಆಕ್ರಮಿಸಿಕೊಂಡು ಸರಕಾರದ ವಿರುದ್ಧ ದಂಗೆಯೆದ್ದರು. ಆದರೆ ಎರಡು ದಿನಗಳ ಕದನದ ನಂತರ ಇವರು ಶರಣಾದರು. ಮಿಲಿಟರಿ ದಂಗೆಗಳಲ್ಲಿ ಭಾಗವಹಿಸಿದವರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನುಗಳು ಬೇಕೆಂದು ಅಧ್ಯಕ್ಷೆ ಅಕ್ವಿನೋ ಹೇಳಿದ್ದಾರೆ. 'ಅಗತ್ಯವಾದರೆ ಬಲಪ್ರಯೋಗ ಮಾಡಿ ಸಂವಿಧಾನವನ್ನು ಎತ್ತಿಹಿಡಿಯುವುದಾಗಿ ಅವರು ಹೇಳಿದ್ದಾರೆ.'

ಲ್ಯಾಟಿನ್ ಅಮೇರಿಕದ ಜನತೆಗೊಂದು ಬಹಿರಂಗ ಪತ್ರ

ಲ್ಯಾಟಿನ್ ಅಮೇರಿಕದ ಎಲ್‌ಸಾಲ್ವೆಡಾರ್, ಡೋಮಿನಿಕ್ ರಿಪಬ್ಲಿಕ್, ಅರ್ಜೆಂಟಿನಾ, ಹೊಂಡುರಾಸ್ ಮತ್ತು ಕೋಸ್ಟರಿಕಾದ ಕಮ್ಯುನಿಸ್ಟ್ ಪಕ್ಷಗಳು ಪೂರ್ವ ಯುರೋಪು ಮತ್ತು ನಂತರ ಸಮಾಜವಾದಿ ದೇಶಗಳಲ್ಲಿನ ವಿದ್ಯಮಾನಗಳ ಬಗ್ಗೆ ಚರ್ಚಿಸಲು ಸಭೆ ಸೇರಿದ್ದವು. ಆ ಸಭೆಯ ನಂತರ 'ಲ್ಯಾಟಿನ್ ಅಮೇರಿಕಾದ ಕ್ರಾಂತಿಕಾರಿ ಮತ್ತು ಪ್ರಗತಿಪರ ಶಕ್ತಿಗಳಿಗೊಂದು ಬಹಿರಂಗ ಪತ್ರ' ಎಂಬ ಹೆಸರಿನಲ್ಲಿ ಒಂದು ಹೇಳಿಕೆ ಹೊರಡಿಸಿದವು. ಅದರಲ್ಲಿ ಈ ವಿದ್ಯಮಾನಗಳ ಹಿನ್ನೆಲೆಯಲ್ಲಿ ಲ್ಯಾಟಿನ್ ಅಮೇರಿಕನ್ ಎಡ ಪಂಥೀಯರು ಏನು ಮಾಡಬೇಕು ಎಂದು ವಿಚಾರ ವ್ಯಕ್ತಪಡಿಸಲಾಗಿದೆ.

ಮೂರನೆಯ ಜಗತ್ತಿನ ದೇಶಗಳ(ಲ್ಯಾಟಿನ್ ಅಮೇರಿಕ ಸೇರಿದಂತೆ) ಜನತೆಯ ಕಷ್ಟ ಹಿಸುಕುವ ಧೋರಣೆ. ಅಮೇರಿಕನ್ ಸಾಮ್ರಾಜ್ಯಶಾಹಿಗೆ ತಿರುಮಂತ್ರವಾಗಿ ಅಮೇರಿಕನ್ ಸಾಮ್ರಾಜ್ಯಶಾಹಿ ಹಿಂದೆಂದೂ ಕೇಳರಿಯದ ಬಿಕ್ಕಟ್ಟಿನಲ್ಲಿದೆ. ಅಮೇರಿಕ ಒಂದು ಆರ್ಥಿಕ ಬೃಹತ್‌ಶಕ್ತಿಯಾಗಿ ತನ್ನ ಸ್ಥಾನ ಕಳೆದುಕೊಳ್ಳುತ್ತಿದೆ. ಇಂತಹ ಭಾರಿ ಬಿಕ್ಕಟ್ಟಿನಲ್ಲೂ ಅದು ಸಮಾಜವಾದಿ ಮಾದರಿಯನ್ನು ಅನುಸರಿಸುವಲ್ಲಿ ಆಗಿರುವ ತಪ್ಪುಗಳಿಂದ ಉಂಟಾಗಿರುವ ಬಿಕ್ಕಟ್ಟನ್ನು ಪೂರ್ಣವಾಗಿ ದುರುಪಯೋಗಪಡಿಸಿಕೊಳ್ಳುತ್ತಿದೆ. ಸಮಾಜವಾದಿ ದೇಶಗಳಲ್ಲಿನ ಬೆಳವಣಿಗೆಗಳ ನಂತರ ಅಮೇರಿಕದ ಅಧಿಪತ್ಯ ಹೆಚ್ಚಾಗಿದೆ. ಇದಕ್ಕೆ ಸ್ವಲ್ಪಮಟ್ಟಿಗೆ ಈ ಬೆಳವಣಿಗೆಗಳ ನಂತರ ಪ್ರಗತಿಪರ ಶಕ್ತಿಗಳಲ್ಲಿ ಉಂಟಾಗಿರುವ ಸೈದ್ಧಾಂತಿಕ ಗಲಿಬಿಲಿ ಕಾರಣ. ಇಂತಹದರಲ್ಲೊಂದು ಸಾಮ್ರಾಜ್ಯಶಾಹಿ ಈಗ ಅಸ್ತಿತ್ವದಲ್ಲಿಲ್ಲ ಎಂಬುದು . ಇದನ್ನು ನಾವು ಸಂಪೂರ್ಣ ವಿರೋಧಿಸುತ್ತೇವೆ.

ಸಮಾಜವಾದಿ ದೇಶಗಳಲ್ಲಿ ಪುನರ್ ನವೀಕರಣ, ಸುಧಾರಣೆ,ಪ್ರಜಾತಂತ್ರವನ್ನು ನಾವು ಬೆಂಬಲಿಸುತ್ತೇವೆ. ಆದರೆ ಪಾಶ್ಚಿಮಾತ್ಯ ಪ್ರಜಾಸತ್ತೆಯ ಕಾಪಿಯಾಗಲಿ, ಬಂಡವಾಳಶಾಹಿ ಖಾಸಗೀಕರಣವಾಗಲಿ ಸಮಾಜವಾದಕ್ಕೆ ಪೂರಕ ಎಂದು ನಾವು ಒಪ್ಪುವುದಿಲ್ಲ. ಮೂರನೆಯ ಜಗತ್ತಿನ ಬಗ್ಗೆ ಸಾಮ್ರಾಜ್ಯಶಾಹಿ ಧೋರಣೆಯ ಬಗ್ಗೆ ಅಲಕ್ಷ್ಯ, ಜಾಗತಿಕ ಹಿತಾಸಕ್ತಿಗಳು ಒಂದೇ ಮತ್ತು ಯೂರೋಪಿಯನ್ ಮನೆಯ ಇನ್ನೊಂದು ಹೆಸರಾಗಬಾರದು. ಅದು ಅಮೇರಿಕದಿಂದ ಸ್ವಾತಂತ್ರ್ಯ ಅದರ ಗುರಿಯೂ ಆಗಬೇಕು. ರಾಜಕೀಯ, ಆರ್ಥಿಕ ಕ್ಷೇತ್ರದಲ್ಲಿ ಸಾಮ್ರಾಜ್ಯಶಾಹಿಗೆ ಅನುಕೂಲಕರವಾದ ಮಾದರಿಗಳನ್ನು ಹೇರುವುದನ್ನು ನಾವೂ ವಿರೋಧಿಸುತ್ತೇವೆ. ಪೂರ್ವ ಯೂರೋಪಿನ ಮತ್ತು ಇತರ ಸಮಾಜವಾದಿ ದೇಶಗಳೂ ವಿರೋಧಿಸಬೇಕು. ಈ ದೇಶಗಳಲ್ಲಿ ಸಮಾಜವಾದದ ಪಥದಲ್ಲಿ ದೇಶವನ್ನು ಪುನ: ನಡೆಸುವ ಗುರುತರವಾದ ಜವಾಬ್ದಾರಿಯಲ್ಲಿ, ಇಲ್ಲಿನ ಕಮ್ಯುನಿಸ್ಟ್ ಪಕ್ಷಗಳಿಗೆ ನಾವು ಶುಭ ಕೋರುತ್ತೇವೆ.

ನಾವು ಕ್ರಾಂತಿಕಾರಿ ಅಂತರರಾಷ್ಟ್ರೀಯತೆಯಲ್ಲಿ ನಂಬಿಕೆ ಇಟ್ಟಿದ್ದೇವೆ. ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಮತ್ತು ಸಾರ್ವಭೌಮತ್ವ ಸಾಧಿಸಲು ಜನತಾ ಕ್ರಾಂತಿಯಲ್ಲಿ ನಾವು ನಂಬಿಕೆ ಇಟ್ಟಿದ್ದೇವೆ. ಕ್ರಾಂತಿಯ ಕೇಂದ್ರ ಈಗ ತೃತಿಯ ಜಗತ್ತಿಗೆ ಸಂದಿದೆ. ನಮ್ಮ ಲ್ಯಾಟಿನ್ ಅಮೇರಿಕನ್ ದೇಶಗಳಲ್ಲಿ ಕ್ರಾಂತಿ ನಮಗೊಂದು ಚಾರಿತ್ರಿಕ ಪಂಥಾಹ್ವಾನ(ಸವಾಲು). ಇದರಲ್ಲಿ ಕ್ಯೂಬಾ ಮತ್ತು ಇತರ ಎಲ್ಲಾ ದೇಶಗಳ ಜತೆ ಕ್ರಾಂತಿಕಾರಿ ಸೌಹಾರ್ದ್ಯ ಅತ್ಯಂತ ಅವಶ್ಯಕ.

ಲ್ಯಾಟಿನ್ ಅಮೇರಿಕದ ಕ್ರಾಂತಿಯ ಕಾರ್ಯಕ್ರಮದ ಸಂದರ್ಭದಲ್ಲಿ ಪೂರ್ವ ಯೂರೋಪನ್ನು ಮರೆಯುವುದು ಸಾಧ್ಯವಿಲ್ಲ. ಅದು ಕೆಲವರಲ್ಲಿ ಹತಾಶೆ, ನಿರಾಸೆ ತಂದಿದ್ದ ನಮ್ಮ ಕ್ರಾಂತಿಕಾರಿ ಸಾಮ್ರಾಜ್ಯಶಾಹಿ -ವಿರೋಧವನ್ನು ಇನ್ನಷ್ಟು ದೃಢವಾಗಿಸಿದೆ.

* '..........ನಮ್ಮೆದುರು ಈಗ ಎರಡು ಭಾರಿ ಬಿಕ್ಕಟ್ಟುಗಳಿವೆ... ಒಂದು ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು.............. ಇನ್ನೊಂದು ಕೆಲವು ಸಮಾಜವಾದಿ ಮಾದರಿಗಳ ಬಿಕ್ಕಟ್ಟು. ಈ ಮಾದರಿಗಳು ತಮ್ಮ ಮೂಲ ಉದ್ದೇಶವಾದ ಪ್ರಜಾಪ್ರಭುತ್ವದ ಜತೆ ಸಾಮಾಜಿಕ ನ್ಯಾಯ ಒದಗಿಸುವುದು ಹಾಗೂ ಸತತ ಉತ್ತಮಪಡಿಸುವಿಕೆಯನ್ನು ಬಿಟ್ಟು ಅಧಿಕಾರಿ, ನೌಕರಶಾಹಿ ಮತ್ತು ದಮನಕಾರಿಯಾಗಿದ್ದವು..................................'

* '.........ಅಮೇರಿಕನ್ ಸಾಮ್ರಾಜ್ಯಶಾಹಿ ಆರಂಭಿಸಿದ ಶಸ್ತ್ರಾಸ್ತ್ರ ಸ್ಪರ್ಧೆ, ಆದರದೇ ಬಿಕ್ಕಟ್ಟಿಗೆ ಕಾರಣವಾಗಿದೆ. ಅದೇ ರೀತಿ ಬೇರೆ ಉದ್ದೇಶಗಳು ಮತ್ತು ಬೇರೆ ಆರ್ಥಿಕ ಚೌಕಟ್ಟಿನೊಳಗೆ ಕೆಲಸ ಮಾಡುತ್ತಿದ್ದರೂ ಆರ್ಥಿಕತೆಯಲ್ಲಿ ಶಸ್ತ್ರಾಸ್ತ್ರ ಉತ್ಪಾದನೆಯ ಪಾತ್ರ ಸೋವಿಯತ್ ಒಕ್ಕೂಟವನ್ನು ಆರ್ಥಿಕ ಸ್ಥಗಿತತೆ ಮತ್ತು ಬಿಕ್ಕಟ್ಟಿಗೆ ತಳ್ಳಿದೆ. ಈ ಬಿಕ್ಕಟ್ಟನ್ನು ಎದುರಿಸಲು ಮತ್ತು ಸಮಾಜವಾದವನ್ನು ಪುನರ್‌ನವೀಕರಿಸಲು 'ಪೆರಸ್ತ್ರೋಯಿಕಾ' ಅಗತ್ಯವಾಯಿತು.......'

* '.... ಈ ಕೆಲವು ತಪ್ಪು ನಿಲುವುಗಳು: 'ಸಾಮ್ರಾಜ್ಯಶಾಹಿಯ ಅಸ್ತಿತ್ವವೇ ಇಲ್ಲ', ಬಂಡವಾಳಶಾಹಿ ಶಕ್ತಿಗಳು 'ವಿರೋಧಿಗಳಲ್ಲ', ಮಾತ್ರವಲ್ಲ, ಅವು ಎರಡು ವ್ಯವಸ್ಥೆಗಳು ಮತ್ತು ಶಕ್ತಿಗಳು ಒಮ್ಮತಕ್ಕೆ ಬರುವ ಪ್ರಕ್ರಿಯಯಲ್ಲಿ 'ಸಹಚರರೂ' ಆಗಬಹುದು. ಎಂಬ ಮಟ್ಟಕ್ಕೆ ಹೋಗಿದೆ. ಇಂತಹ ನಿಲುವುಗಳನ್ನು ಖಡಾಖಂಡಿತವಾಗಿ ನಾವು ನಿರಾಕರಿಸುತ್ತೇವೆ. .... ನಿಜವಾಗಿಯೂ ಸಾಮ್ರಾಜ್ಯಶಾಹಿ ಇದೆ ಮಾತ್ರವಲ್ಲ, ಇನ್ನು ಆಕ್ರಮಣಕಾರಿ ಮತ್ತು ಶಕ್ತಿಶಾಲಿಯಾಗಿದೆ.......'

* 'ಪೆರಸ್ತ್ರೋಯಿಕಾ ಹೆಚ್ಚಿನ ಸಮಾಜವಾದ ಮತ್ತು ಪ್ರಜಾಸತ್ತೆ ಕೊಡುವ ಉದ್ದೇಶದಿಂದ ದೂರಕ್ಕೆ ಹೋಗುತ್ತಿದೆ ಎಂಬುದನ್ನು ನಾವು ಆತಂಕದಿಂದ ಗಮನಿಸಿದ್ದೇವೆ. ಅದು ಮಾತ್ರವಲ್ಲ 'ಪೆರಸ್ತ್ರೋಯಿಕಾ'ದ ಒಳಗೆ ಬಂಡವಾಳಶಾಹಿ ಬೆಂಬಲಿಗರು, ಜನಾಂಗ ಆಧಾರದ ಮೇಲಿನ ಪ್ರತ್ಯೇಕವಾದಿಗಳು, ಪ್ರತಿ- ಕ್ರಾಂತಿಕಾರಿಗಳು, ಅಮೇರಿಕ ಮತ್ತು ಇತರ ಪಾಶ್ಚಿಮಾತ್ಯ ಶಕ್ತಿಗಳತ್ತ ಆಕರ್ಷಿತರಾಗಿರುವವರು ಮತ್ತು ಕ್ರಾಂತಿಕಾರಿ ಅಂತರರಾಷ್ಟ್ರೀಯತೆಯನ್ನು ಮುಗಿಸಬಯಸುವವರು ಸೇರಿಕೊಂಡಿದ್ದಾರೆ ಎಂಬುದು ಇನ್ನೂ ಹೆಚ್ಚು ಆತಂಕಕಾರಿಯಾಗಿದೆ.....'

* 'ಸೋವಿಯತ್ ಒಕ್ಕೂಟ ಮತ್ತು ಇನ್ನೂ ಹೆಚ್ಚಿನ ಮಟ್ಟಿಗೆ ಪೂರ್ವ ಯುರೋಪಿನಲ್ಲಿ ಸಮಾಜವಾದ ಶಕ್ತಿಹೀನವಾದದ್ದು, ಸಮಾಜವಾದಕ್ಕೆ ಸರಿಯಾದ ದಾರಿ ತೋರಿಸುವ ಮಂಚೂಣಿ ಪಕ್ಷದ ಬಿಕ್ಕಟ್ಟು ಅಥವಾ ಅಭಾವದಿಂದ ....ಈಗ ಅಲ್ಲಿ ನಡೆಯುತ್ತಿರುವುದು ಸಮಾಜವಾದವನ್ನು ಕಾಪಾಡಿ ಪುನರ್‌ನವೀಕರಿಸುವುದು ಮತ್ತು ಬಂಡವಾಳಶಾಹಿ ಹಿಂತಿರುಗಿಸು ಇವೆರಡೂ ನಿಲುವುಗಳ ನಡುವೆ ಹೋರಾಟ. ಇದರಲ್ಲಿ ಪೂರ್ವ ಯುರೋಪು ಎರಡನೆಯ ನಿಲುವಿನತ್ತ ವಾಲುತ್ತಿರುವಂತೆ ಕಾಣುತ್ತಿದೆ. ಆದರೆ ಸೋವಿಯತ್ ಒಕ್ಕೂಟದಲ್ಲಿ ಆ ಪರಿಸ್ಥಿತಿ ಇಲ್ಲ. ಆದರೆ ಮುಂದೇನಾಗುತ್ತೋ ನೋಡಬೇಕು......'